सत्यमेव जयते

**ಭಾರತ ಸರ್ಕಾರ**

**ಕಾನೂನು ಮತ್ತು ನ್ಯಾಯ ಮಂತ್ರಾಲಯ**

# ವಾಸ್ತುಶಿಲ್ಪಿಗಳ ಅಧಿನಿಯಮ, 1972

**(1972ರ ಅಧಿನಿಯಮ, ಸಂಖ್ಯೆ 20)**

**[25ನೇ ಏಪ್ರಿಲ್, 2011 ರಂದು ಜಾರಿಯಲ್ಲಿದ್ದಂತೆ]**

# The ARCHITECTS ACT, 1972

**(Act No. 20 of 1972)**

**[As on 25th April, 2011]**

## ಮುನ್ನುಡಿ

25.04.2011 ರಂದು ಜಾರಿಯಲ್ಲಿದ್ದಂತೆ, ದಿ ಆರ್ಕಿಟೆಕ್ಟ್ಸ್ ಆ್ಯಕ್ಟ್, 1972 (1972ರ 20) – ಇದರ ಕನ್ನಡ ಅಧಿಕೃತ ಪಾಠವು ಈ ಆವೃತ್ತಿಯಲ್ಲಿರುತ್ತದೆ ಮತ್ತು ಇದನ್ನು 25.04.2011 ರ ಭಾರತ ರಾಜಪತ್ರದ IXನೇ ಭಾಗದ, 1ನೇ ವಿಭಾಗದ, 45ನೇ ಸಂಪುಟದ, 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 02 ರಿಂದ 19ರ ವರೆಗಿನ ಪುಟಗಳಲ್ಲಿ ಪ್ರಕಟಿಸಲಾಗಿತ್ತು.

ಕನ್ನಡದ ಈ ಪಾಠವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಪ್ರಕಟಿಸಲಾಗಿತ್ತು. ಅಂಥ ಪ್ರಕಟಣೆಯ ತರುವಾಯ ಇದು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವಾಗಿರುತ್ತದೆ.

**ವಿ.ಕೆ. ಭಸೀನ್**
ನವದೆಹಲಿ — ಕಾರ್ಯದರ್ಶಿ
ದಿನಾಂಕ: — ಭಾರತ ಸರ್ಕಾರ.

## PREFACE

This edition of the Architects Act, 1972 (20 of 1972) as on the 25.04.2011 contains the authoritative text of that Act in Kannada which was published in the Gazette of India Extraordinary, Part IX, Section 1, No.1, Vol. 45, dated 25.04.2011 on pages 02 to 19.

This Kannada text was published under the authority of the President under clause (a) of Section 2 of the Authoritative Texts (Central Laws) Act, 1973 and on such publication it became the authoritative text of that Act in Kannada.

New Delhi — **V.K. BHASIN**
Date : — Secretary,
Government of India.

# ವಾಸ್ತುಶಿಲ್ಪಿಗಳ ಅಧಿನಿಯಮ, 1972

## ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು:** **ಪುಟಗಳು**

### ಅಧ್ಯಾಯ – I

### ಪ್ರಾರಂಭಿಕ


1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ 1

2. ಪರಿಭಾಷೆಗಳು 1


### ಅಧ್ಯಾಯ – II

### ವಾಸ್ತುಶಿಲ್ಪ ಪರಿಷತ್ತು


3. ವಾಸ್ತುಶಿಲ್ಪ ಪರಿಷತ್ತಿನ ರಚನೆ 2

4. ಪರಿಷತ್ತಿನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು 4

5. ಚುನಾವಣೆಗಳ ವಿಧಾನ 5

6. ಪದಾವಧಿ ಮತ್ತು ಆಕಸ್ಮಿಕ ಖಾಲಿ ಸ್ಥಾನಗಳು 5

7. ಪರಿಷತ್ತಿನ, ಕಾರ್ಯನಿರ್ವಾಹಕ ಸಮಿತಿಯ ಅಥವಾ ಇತರ ಸಮಿತಿಗಳ ಕಾರ್ಯದ ಅಥವಾ ವ್ಯವಹರಣೆಯ ಸಿಂಧುತ್ವವು ಖಾಲಿಸ್ಥಾನ, ಇತ್ಯಾದಿಗಳ ಕಾರಣಗಳಿಂದ ಅಸಿಂಧುವಾಗತಕ್ಕದ್ದಲ್ಲ 6

8. ಅಸಮರ್ಥತೆಗಳು 7

9. ಪರಿಷತ್ತಿನ ಸಭೆಗಳು 7

10. ಕಾರ್ಯನಿರ್ವಾಹಕ ಸಮಿತಿ ಮತ್ತು ಇತರ ಸಮಿತಿಗಳು 7

11. ಅಧ್ಯಕ್ಷನಿಗೆ, ಉಪಾಧ್ಯಕ್ಷನಿಗೆ ಮತ್ತು ಸದಸ್ಯರಿಗೆ ಫೀಜುಗಳು ಮತ್ತು ಭತ್ಯೆಗಳು 8

12. ಅಧಿಕಾರಿಗಳು ಮತ್ತು ಇತರ ನೌಕರರು 8

13. ಪರಿಷತ್ತಿನ ಹಣಕಾಸು 9

14. ಭಾರತದಲ್ಲಿ ಪ್ರಾಧಿಕಾರಗಳು ನೀಡಿದ ಅರ್ಹತೆಗಳ ಮನ್ನಣೆ 10

15. ವಿದೇಶಗಳಲ್ಲಿನ ಪ್ರಾಧಿಕಾರಗಳು ನೀಡಿರುವ ವಾಸ್ತುಶಿಲ್ಪದ ಅರ್ಹತೆಗಳ ಮನ್ನಣೆ 10

16. ಅನುಸೂಚಿಯನ್ನು ತಿದ್ದುಪಡಿ ಮಾಡಲು ಕೇಂದ್ರ ಸರ್ಕಾರದ ಅಧಿಕಾರ 11

17. ಮನ್ನಣೆಯ ಪರಿಣಾಮ 11

18. ಅಧ್ಯಯನ ಪಠ್ಯ ವಿಷಯಗಳಿಗೆ ಮತ್ತು ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಅಗತ್ಯ ಮಾಹಿತಿ ಪಡೆದುಕೊಳ್ಳಲು ಅಧಿಕಾರ 11

19. ಪರೀಕ್ಷೆಗಳ ತಪಾಸಣೆ 11

20. ಮನ್ನಣೆಯನ್ನು ಹಿಂತೆಗೆದುಕೊಳ್ಳುವುದು 12

21. ವಾಸ್ತುಶಿಲ್ಪ ಶಿಕ್ಷಣದ ಕನಿಷ್ಠ ಮಾನದಂಡ 13

22. ವೃತ್ತೀಯ ನಡತೆ 13

## ಅಧ್ಯಾಯ – III

## ವಾಸ್ತುಶಿಲ್ಪಿಗಳ ನೋಂದಣಿ


| | | |
|---|---|---|
| 23. | ರಿಜಿಸ್ಟರನ್ನು ಸಿದ್ಧಪಡಿಸುವುದು ಮತ್ತು ನಿರ್ವಹಿಸುವುದು | 14 |
| 24. | ಮೊದಲ ಬಾರಿಗೆ ರಿಜಿಸ್ಟರನ್ನು ಸಿದ್ಧಪಡಿಸುವುದು | 14 |
| 25. | ರಿಜಿಸ್ಟರಿನಲ್ಲಿ ನಮೂದಿಸುವುದಕ್ಕೆ ಅರ್ಹತೆ | 16 |
| 26. | ತರುವಾಯದ ನೋಂದಣಿಗಳ ಬಗ್ಗೆ ಪ್ರಕ್ರಿಯೆ | 16 |
| 27. | ನವೀಕರಣ ಶುಲ್ಕಗಳು | 17 |
| 28. | ಹೆಚ್ಚಿನ ಅರ್ಹತೆಯ ನಮೂದು | 17 |
| 29. | ರಿಜಿಸ್ಟರಿನಿಂದ ತೆಗೆದುಹಾಕುವುದು | 18 |
| 30. | ದುರ್ನಡತೆಗೆ ಸಂಬಂಧಿಸಿದ ವಿಚಾರಣೆಗಳಲ್ಲಿ ಪ್ರಕ್ರಿಯೆ | 19 |
| 31. | ಪ್ರಮಾಣ ಪತ್ರಗಳನ್ನು ಹಿಂದಿರುಗಿಸುವುದು | 19 |
| 32. | ರಿಜಿಸ್ಟರಿನಲ್ಲಿ ಪುನಃ ಸೇರಿಸುವುದು | 19 |
| 33. | ಪ್ರಮಾಣಪತ್ರಗಳ ದ್ವಿಪ್ರತಿಯ ನೀಡಿಕೆ | 19 |
| 34. | ರಿಜಿಸ್ಟರಿನ ಮುದ್ರಣ | 19 |
| 35. | ನೋಂದಣಿಯ ಪರಿಣಾಮ | 20 |


## ಅಧ್ಯಾಯ – IV

## ಸಂಕೀರ್ಣ


| | | |
|---|---|---|
| 36. | ನೋಂದಣಿ ಆಗಿದೆಯೆಂದು ಸುಳ್ಳಾಗಿ ಕ್ಲೇಮು ಮಾಡುವುದಕ್ಕಾಗಿ ದಂಡನೆ | 20 |
| 37. | ಪದನಾಮ ಬಳಸುವುದರ ವಿರುದ್ಧ ನಿಷೇಧ | 20 |
| 38. | ನೋಂದಣಿ ಪ್ರಮಾಣಪತ್ರವನ್ನು ಹಿಂದಿರುಗಿಸಲು ವಿಫಲತೆ | 21 |
| 39. | ಅಪರಾಧಗಳ ಸಂಜ್ಞೇಯತೆ | 21 |
| 40. | ಪರಿಷತ್ತು ಒದಗಿಸತಕ್ಕ ಮಾಹಿತಿ ಮತ್ತು ಅದರ ಪ್ರಕಟಣೆ | 22 |
| 41. | ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ | 22 |
| 42. | ಪರಿಷತ್ತಿನ ಸದಸ್ಯರು ಮತ್ತು ಅಧಿಕಾರಿಗಳು ಹಾಗೂ ನೌಕರರು ಲೋಕ ನೌಕರರಾಗಿರುವುದು | 22 |
| 43. | ತೊಂದರೆಗಳನ್ನು ನಿವಾರಿಸಲು ಅಧಿಕಾರ | 22 |
| 44. | ನಿಯಮಗಳನ್ನು ರಚಿಸಲು ಕೇಂದ್ರ ಸರ್ಕಾರದ ಅಧಿಕಾರ | 23 |
| 45. | ವಿನಿಯಮನಗಳನ್ನು ರಚಿಸಲು ಪರಿಷತ್ತಿನ ಅಧಿಕಾರ | 24 |
| | ಅನುಸೂಚಿ | 26 |

# ವಾಸ್ತುಶಿಲ್ಪಿಗಳ ಅಧಿನಿಯಮ, 1972
## (1972ರ ಅಧಿನಿಯಮ ಸಂಖ್ಯೆ 20)

**[ಮೇ 31, 1972]**

ವಾಸ್ತುಶಿಲ್ಪಿಗಳ ನೋಂದಣಿಗಾಗಿ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವ ಅಧಿನಿಯಮ.

ಭಾರತ ಗಣರಾಜ್ಯದ ಇಪ್ಪತ್ತೂರನೇ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

## ಅಧ್ಯಾಯ –I
## ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.– (1)** ಈ ಅಧಿನಿಯಮವನ್ನು ವಾಸ್ತುಶಿಲ್ಪಿಗಳ ಅಧಿನಿಯಮ, 1972 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ವಾಸ್ತುಶಿಲ್ಪಿ" ಎಂದರೆ ತತ್ಕಾಲದಲ್ಲಿ ಯಾವ ವ್ಯಕ್ತಿಯ ಹೆಸರನ್ನು ರಿಜಿಸ್ಟರಿನಲ್ಲಿ ನಮೂದಿಸಲಾಗಿದೆಯೋ ಆ ವ್ಯಕ್ತಿ ಎಂದು ಅರ್ಥ;

(ಬಿ) "ಪರಿಷತ್ತು" ಎಂದರೆ 3ನೇ ಪ್ರಕರಣದ ಮೇರೆಗೆ ರಚಿತವಾದ ವಾಸ್ತುಶಿಲ್ಪ ಪರಿಷತ್ತು ಎಂದು ಅರ್ಥ;

(ಸಿ) "ಭಾರತೀಯ ವಾಸ್ತುಶಿಲ್ಪಿಗಳ ಸಂಸ್ಥೆ" ಎಂದರೆ ಸೊಸೈಟಿಗಳ ನೋಂದಣಿ ಅಧಿನಿಯಮ, 1860ರ (1860ರ 21) ಮೇರೆಗೆ ನೋಂದಾಯಿತವಾದ ಭಾರತೀಯ ವಾಸ್ತುಶಿಲ್ಪಿಗಳ ಸಂಸ್ಥೆ ಎಂದು ಅರ್ಥ;

(ಡಿ) "ಮನ್ನಣೆ ಪಡೆದ ಅರ್ಹತೆ" ಎಂದರೆ ಅನುಸೂಚಿಯಲ್ಲಿ ತತ್ಕಾಲದಲ್ಲಿ ಸೇರಿಸಿರುವ ಅಥವಾ 15ನೇ ಪ್ರಕರಣದ ಮೇರೆಗೆ ಅಧಿಸೂಚಿಸಲಾದ ವಾಸ್ತುಶಿಲ್ಪದಲ್ಲಿನ ಯಾವುದೇ ಅರ್ಹತೆ ಎಂದು ಅರ್ಥ;

(ಇ) "ರಿಜಿಸ್ಟರು" ಎಂದರೆ 23ನೇ ಪ್ರಕರಣದ ಮೇರೆಗೆ ಇಟ್ಟುಕೊಂಡು ಬಂದಿರುವ ವಾಸ್ತುಶಿಲ್ಪಿಗಳ ರಿಜಿಸ್ಟರು ಎಂದು ಅರ್ಥ;

(ಎಫ್) "ವಿನಿಯಮನ" ಎಂದರೆ ಈ ಅಧಿನಿಯಮದ ಮೇರೆಗೆ ಪರಿಷತ್ತು ರಚಿಸಿದ ವಿನಿಯಮನ ಎಂದು ಅರ್ಥ.

(ಜಿ) "ನಿಯಮ" ಎಂದರೆ ಕೇಂದ್ರ ಸರ್ಕಾರವು ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮ ಎಂದು ಅರ್ಥ.

## ಅಧ್ಯಾಯ – II
## ವಾಸ್ತುಶಿಲ್ಪ ಪರಿಷತ್ತು

**3. ವಾಸ್ತುಶಿಲ್ಪ ಪರಿಷತ್ತಿನ ರಚನೆ.–** (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಅಂತಹ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ದಿನಾಂಕದಿಂದ ಜಾರಿಗೆ ಬರುವಂತೆ ವಾಸ್ತುಶಿಲ್ಪ ಪರಿಷತ್ತು ಎಂದು ಕರೆಯಲಾಗುವ ಪರಿಷತ್ತನ್ನು ರಚಿಸತಕ್ಕದ್ದು. ಅದು ಶಾಶ್ವತ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನೂ ಆರ್ಜಿಸಲು, ಹೊಂದಲು ಹಾಗೂ ವಿಲೆ ಮಾಡಲು ಮತ್ತು ಕರಾರನ್ನು ಮಾಡಿಕೊಳ್ಳಲು ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಆ ಹೆಸರಿನಲ್ಲಿ ಅದು ದಾವೆ ಹೂಡಬಹುದು ಅಥವಾ ದಾವೆಗೆ ಗುರಿಯಾಗಬಹುದು.

(2) ಪರಿಷತ್ತಿನ ಕೇಂದ್ರ ಕಚೇರಿಯು ದೆಹಲಿಯಲ್ಲಿರತಕ್ಕದ್ದು ಅಥವಾ ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದ ಇತರ ಸ್ಥಳದಲ್ಲಿರತಕ್ಕದ್ದು.

(3) ಪರಿಷತ್ತು ಈ ಕೆಳಕಂಡ ಸದಸ್ಯರನ್ನು ಹೊಂದಿರತಕ್ಕದ್ದು, ಎಂದರೆ:–

(ಎ) ಭಾರತೀಯ ವಾಸ್ತುಶಿಲ್ಪಿಗಳ ಸಂಸ್ಥೆಯು ತನ್ನ ಸದಸ್ಯರೊಳಗಿಂದ ಚುನಾಯಿಸಿದ, ಮನ್ನಣೆ ಪಡೆದ ಅರ್ಹತೆಯುಳ್ಳ ಐವರು ವಾಸ್ತುಶಿಲ್ಪಿಗಳು;

(ಬಿ) ಭಾರತ ಸರ್ಕಾರದ ಹಿಂದಿನ ಶಿಕ್ಷಣ ಮಂತ್ರಾಲಯ ಸಂ.ಎಫ್ 16–10 /44–ಇ–III, ದಿನಾಂಕ 30ನೇ ನವೆಂಬರ್, 1945ರ ನಿರ್ಣಯದ ಪ್ರಕಾರ ಸ್ಥಾಪಿತವಾದ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತಿನಿಂದ ನಾಮನಿರ್ದೇಶಿತರಾದ ಇಬ್ಬರು ವ್ಯಕ್ತಿಗಳು;

(ಸಿ) ಮನ್ನಣೆ ಪಡೆದ ಅರ್ಹತೆಗಳಿಗಾಗಿ ಪೂರ್ಣಕಾಲಿಕ ಶಿಕ್ಷಣ ನೀಡುವ ಭಾರತದಲ್ಲಿನ ವಾಸ್ತುಶಿಲ್ಪ ಸಂಸ್ಥೆಗಳ ಮುಖ್ಯಸ್ಥರು ತಮ್ಮೊಳಗಿಂದ ಚುನಾಯಿಸಿದ ಐವರು ವ್ಯಕ್ತಿಗಳು;

(ಡಿ) ರಕ್ಷಣೆ ಮತ್ತು ರೈಲ್ವೆಗೆ ಸಂಬಂಧಿಸಿದ ಸರ್ಕಾರಿ ವ್ಯವಹಾರಗಳನ್ನು ಹಂಚಿಕೆ ಮಾಡಿರುವ ಕೇಂದ್ರ ಸರ್ಕಾರದ ಮಂತ್ರಾಲಯಗಳಲ್ಲಿನ ಮುಖ್ಯ ವಾಸ್ತುಶಿಲ್ಪಿಗಳು ಮತ್ತು ಕೇಂದ್ರ ಲೋಕೋಪಯೋಗಿ ಇಲಾಖೆಯ ವಾಸ್ತುಶಿಲ್ಪ ಸಂಸ್ಥೆಯ ಮುಖ್ಯಸ್ಥರು, ಪದನಿಮಿತ್ತ;

(ಇ) ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡಿದ ಒಬ್ಬ ವ್ಯಕ್ತಿ;

(ಎಫ್) ಪ್ರತಿಯೊಂದು ರಾಜ್ಯದ, ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತನಾದ ಒಬ್ಬ ವಾಸ್ತುಶಿಲ್ಪಿ;

(ಜಿ) ಇಂಜಿನಿಯರುಗಳ ಸಂಸ್ಥೆಯು (ಭಾರತ) ತನ್ನ ಸದಸ್ಯರೊಳಗಿಂದ ನಾಮನಿರ್ದೇಶಿಸಿದ ಇಬ್ಬರು ವ್ಯಕ್ತಿಗಳು; ಮತ್ತು

(ಹೆಚ್) ಭಾರತ ಭೂ ಮಾಪಕರ ಸಂಸ್ಥೆಯು ತನ್ನ ಸದಸ್ಯರೊಳಗಿಂದ ನಾಮನಿರ್ದೇಶಿಸಿದ ಒಬ್ಬ ವ್ಯಕ್ತಿ;

**ವಿವರಣೆ.**– ಈ ಉಪಪ್ರಕರಣದ ಉದ್ದೇಶಗಳಿಗಾಗಿ,–

(ಎ) "ಇಂಜಿನಿಯರುಗಳ ಸಂಸ್ಥೆ (ಭಾರತ)" ಎಂದರೆ 1913ರ (1913ರ 7) ಭಾರತೀಯ ಕಂಪನಿಗಳ ಅಧಿನಿಯಮದ ಮೇರೆಗೆ, 1920ರಲ್ಲಿ ಮೊದಲಿಗೆ ನೋಂದಾಯಿಸಲಾದ ಮತ್ತು ಆ ತರುವಾಯ 1935ರಲ್ಲಿ ರಾಯಲ್ ಚಾರ್ಟರ್‌ನ ಮೂಲಕ ನಿಗಮನಗೊಳಿಸಲಾದ ಇಂಜಿನಿಯರುಗಳ ಸಂಸ್ಥೆ (ಭಾರತ) ಎಂದು ಅರ್ಥ.

(ಬಿ) "ಭಾರತ ಭೂ ಸರ್ವೇಕ್ಷಕರ ಸಂಸ್ಥೆ" ಎಂದರೆ 1860ರ (1860ರ 21) ಸೊಸೈಟಿಗಳ ನೋಂದಣಿ ಅಧಿನಿಯಮದ ಮೇರೆಗೆ ನೋಂದಾಯಿತವಾದ ಭೂ ಸರ್ವೇಕ್ಷಕರ ಸಂಸ್ಥೆ ಎಂದು ಅರ್ಥ.

(4) (3)ನೇ ಉಪಪ್ರಕರಣದ (ಎ) ಖಂಡದಲ್ಲಿ ಏನೇ ಒಳಗೊಂಡಿದ್ದರೂ, ಕೇಂದ್ರ ಸರ್ಕಾರವು, ರಿಜಿಸ್ಟರನ್ನು ತಯಾರಿಸುವಾಗ, ಭಾರತ ವಾಸ್ತುಶಿಲ್ಪ ಸಂಸ್ಥೆಯೊಂದಿಗೆ ಸಮಾಲೋಚಿಸಿ, 25ನೇ ಪ್ರಕರಣದ ಮೇರೆಗೆ ನೋಂದಣಿಗಾಗಿ ಅರ್ಹರಿರುವ ಸದರಿ (ಎ) ಖಂಡದಲ್ಲಿ ಉಲ್ಲೇಖಿಸಿರುವ ವ್ಯಕ್ತಿಗಳನ್ನು ಪ್ರಥಮ

ಪರಿಷತ್ತಿಗೆ ನಾಮನಿರ್ದೇಶನ ಮಾಡಬಹುದು ಮತ್ತು ಹಾಗೆ ನಾಮನಿರ್ದೇಶನಗೊಂಡ ವ್ಯಕ್ತಿಗಳು ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು.

(5) (3)ನೇ ಉಪಪ್ರಕರಣದ (ಎಫ್) ಖಂಡದಲ್ಲಿ ಏನೇ ಒಳಗೊಂಡಿದ್ದರೂ, ಕೇಂದ್ರ ಸರ್ಕಾರವು, ರಿಜಿಸ್ಟರನ್ನು ಸಿದ್ದಪಡಿಸುವವರೆಗೆ, ಸಂಬಂಧಪಟ್ಟ ರಾಜ್ಯ ಸರ್ಕಾರಗಳೊಂದಿಗೆ ಸಮಾಲೋಚಿಸಿ, 25ನೆಯ ಪ್ರಕರಣದ ಮೇರೆಗೆ ನೋಂದಣಿಗಾಗಿ ಅರ್ಹರಿರುವ ಸದರಿ (ಎಫ್) ಖಂಡದಲ್ಲಿ ಉಲ್ಲೇಖಿಸಿರುವ ವ್ಯಕ್ತಿಗಳನ್ನು ಪ್ರಥಮ ಪರಿಷತ್ತಿಗೆ ನಾಮನಿರ್ದೇಶನ ಮಾಡಬಹುದು ಮತ್ತು ಹಾಗೆ ನಾಮನಿರ್ದೇಶನಗೊಂಡ ವ್ಯಕ್ತಿಗಳು, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು.

**4. ಪರಿಷತ್ತಿನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು.–** (1) ಪರಿಷತ್ತಿನ ಅಧ್ಯಕ್ಷನನ್ನು ಮತ್ತು ಉಪಾಧ್ಯಕ್ಷನನ್ನು ಪರಿಷತ್ತಿನ ಸದಸ್ಯರು ತಮ್ಮೊಳಗಿಂದ ಚುನಾಯಿಸತಕ್ಕದ್ದು:

ಪರಂತು, ಪರಿಷತ್ತಿನ ಪ್ರಥಮ ರಚನೆಯ ನಂತರ ಮತ್ತು ಅಧ್ಯಕ್ಷನನ್ನು ಚುನಾಯಿಸುವವರೆಗೆ, ಈ ಕುರಿತು ಕೇಂದ್ರ ಸರ್ಕಾರವು ನಾಮನಿರ್ದೇಶಿಸಿದ ಪರಿಷತ್ತಿನ ಒಬ್ಬ ಸದಸ್ಯನು, ಅಧ್ಯಕ್ಷನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(2) ಪರಿಷತ್ತಿನ ಚುನಾಯಿತ ಅಧ್ಯಕ್ಷನು ಅಥವಾ ಉಪಾಧ್ಯಕ್ಷನು ಮೂರು ವರ್ಷಗಳ ಅವಧಿಯವರೆಗೆ ಅಥವಾ ಅವನು ಪರಿಷತ್ತಿನ ಸದಸ್ಯನಾಗಿರುವುದು ನಿಂತು ಹೋಗುವವರೆಗೆ – ಇವುಗಳಲ್ಲಿ ಯಾವುದು ಮೊದಲೋ, ಅಲ್ಲಿಯವರೆಗೆ ಪದಧಾರಣ ಮಾಡತಕ್ಕದ್ದು. ಆದರೆ ಪರಿಷತ್ತಿನ ಸದಸ್ಯನಾಗಿರುವುದಕ್ಕೆ ಒಳಪಟ್ಟು, ಅವನು ಮರು ಚುನಾವಣೆಗೆ ಅರ್ಹನಾಗಿರತಕ್ಕದ್ದು:

ಪರಂತು,–

(ಎ) ಅಧ್ಯಕ್ಷನು ಅಥವಾ ಉಪಾಧ್ಯಕ್ಷನು ತನ್ನ ಸಹಿಯೊಂದಿಗೆ ಲಿಖಿತದಲ್ಲಿ, ಸಂದರ್ಭಾನುಸಾರ, ಉಪಾಧ್ಯಕ್ಷನನ್ನು ಅಥವಾ ಅಧ್ಯಕ್ಷನನ್ನು ಸಂಬೋಧಿಸಿ, ತನ್ನ ಹುದ್ದೆಗೆ ರಾಜೀನಾಮೆ ನೀಡಬಹುದು.

(ಬಿ) ಅಧ್ಯಕ್ಷನು ಅಥವಾ ಉಪಾಧ್ಯಕ್ಷನು ಮೂರು ವರ್ಷಗಳ ತನ್ನ ಅವಧಿಯು ಮುಕ್ತಾಯವಾಗಿದ್ದರೂ ಸಹ, ತನ್ನ ಉತ್ತರಾಧಿಕಾರಿಗಳು ಆ ಹುದ್ದೆಗೆ ಬರುವವರೆಗೆ ಅವನು ಪದದಲ್ಲಿರುವುದು ಮುಂದುವರೆಯತಕ್ಕದ್ದು.

(3) ಪರಿಷತ್ತಿನ ಅಧ್ಯಕ್ಷನು ಮತ್ತು ಉಪಾಧ್ಯಕ್ಷನು ವಿನಿಯಮನಗಳ ಮೂಲಕ ನಿಯಮಿಸಬಹುದಾದಂತಹ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂತಹ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

**5. ಚುನಾವಣೆಗಳ ವಿಧಾನ.–** (1) ಈ ಅಧ್ಯಾಯದ ಮೇರೆಗಿನ ಚುನಾವಣೆಗಳನ್ನು ನಿಯಮಗಳ ಮೂಲಕ ನಿಯಮಿಸಬಹುದಾದ ರೀತಿಯಲ್ಲಿ ನಡೆಸತಕ್ಕದ್ದು.

(2) ಯಾವುದೇ ಅಂಥ ಚುನಾವಣೆಗೆ ಸಂಬಂಧಿಸಿದಂತೆ ಯಾವುದೇ ವಿವಾದ ಉದ್ಭವಿಸಿದಲ್ಲಿ, ಕೇಂದ್ರ ಸರ್ಕಾರವು ಈ ಕುರಿತು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನೇಮಕ ಮಾಡಿದ ನ್ಯಾಯಾಧಿಕರಣಕ್ಕೆ ಪರಿಷತ್ತು ಆ ವಿಷಯವನ್ನು ಉಲ್ಲೇಖಿಸತಕ್ಕದ್ದು ಮತ್ತು ನ್ಯಾಯಾಧಿಕರಣದ ತೀರ್ಮಾನವೇ ಅಂತಿಮವಾಗಿರತಕ್ಕದ್ದು:

ಪರಂತು, ಚುನಾವಣೆಯ ಫಲಿತಾಂಶವನ್ನು ಘೋಷಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಬಾಧಿತ ಪಕ್ಷಕಾರನು ಪರಿಷತ್ತಿಗೆ ಅರ್ಜಿ ಸಲ್ಲಿಸಿದ್ದ ಹೊರತು ಅಂತಹ ಯಾವುದೇ ಉಲ್ಲೇಖವನ್ನು ಮಾಡತಕ್ಕದ್ದಲ್ಲ.

(3) ನ್ಯಾಯಾಧಿಕರಣದ ವೆಚ್ಚಗಳನ್ನು ಪರಿಷತ್ತು ಭರಿಸತಕ್ಕದ್ದು.

**6. ಪದಾವಧಿ ಮತ್ತು ಆಕಸ್ಮಿಕ ಖಾಲಿ ಸ್ಥಾನಗಳು.–** (1) ಈ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಚುನಾಯಿತನಾದ ಅಥವಾ ನಾಮನಿರ್ದೇಶಿತನಾದ ಸದಸ್ಯನು, ಅವನು ಚುನಾಯಿತನಾದ ದಿನಾಂಕದಿಂದ ಅಥವಾ ನಾಮನಿರ್ದೇಶನಗೊಂಡ ದಿನಾಂಕದಿಂದ ಮೂರು ವರ್ಷಗಳ ಅವಧಿಯವರೆಗೆ ಅಥವಾ ಅವನ ಉತ್ತರಾಧಿಕಾರಿಯು ಕ್ರಮಬದ್ಧನಾಗಿ ಚುನಾಯಿತನಾಗುವವರೆಗೆ ಅಥವಾ ನಾಮನಿರ್ದೇಶನಗೊಳ್ಳುವವರೆಗೆ, ಇವುಗಳಲ್ಲಿ ಯಾವುದು ನಂತರವೋ, ಅಲ್ಲಿಯವರೆಗೆ ಪದಧಾರಣ ಮಾಡತಕ್ಕದ್ದು.

(2) ಚುನಾಯಿತನಾದ ಅಥವಾ ನಾಮನಿರ್ದೇಶಿತನಾದ ಸದಸ್ಯನು ಯಾವುದೇ ಕಾಲದಲ್ಲಿ ತನ್ನ ಸಹಿಯೊಂದಿಗೆ ಲಿಖಿತದಲ್ಲಿ ಅಧ್ಯಕ್ಷನನ್ನು ಅಥವಾ ಅಧ್ಯಕ್ಷನ ಅನುಪಸ್ಥಿತಿಯಲ್ಲಿ ಉಪಾಧ್ಯಕ್ಷನನ್ನು ಸಂಬೋಧಿಸಿ, ತನ್ನ ಸದಸ್ಯತ್ವಕ್ಕೆ ರಾಜೀನಾಮೆ ನೀಡಬಹುದು ಮತ್ತು ಅಂತಹ ಸದಸ್ಯನ ಸ್ಥಾನವು ಆ ತರುವಾಯ ಖಾಲಿಯಾಗತಕ್ಕದ್ದು.

(3) ಸದಸ್ಯನು ತನ್ನ ಸ್ಥಾನವನ್ನು,–

(i) ಪರಿಷತ್ತಿನ ಒಂದಾದ ಮೇಲೊಂದರಂತೆ ಬರುವ ಮೂರು ಸಾಮಾನ್ಯ ಸಭೆಗಳಿಗೆ ಯಾವುದೇ ಕಾರಣವಿಲ್ಲದೆ ಗೈರುಹಾಜರಾಗಿದ್ದು, ಅದು ಪರಿಷತ್ತಿನ ಅಭಿಪ್ರಾಯದಲ್ಲಿ ಸಾಕಷ್ಟಾಗಿದ್ದರೆ; ಅಥವಾ

(ii) 3ನೇ ಪ್ರಕರಣದ (3)ನೇ ಉಪಪ್ರಕರಣದ (ಎ) ಖಂಡದಲ್ಲಿ, (ಜಿ) ಖಂಡದಲ್ಲಿ ಅಥವಾ (ಹೆಚ್) ಖಂಡದಲ್ಲಿ ಉಲ್ಲೇಖಿಸಿದ ನಿಕಾಯಕ್ಕೆ, ಸಂದರ್ಭಾನುಸಾರ ಅವನು ಚುನಾಯಿತನಾಗಿದ್ದು ಅಥವಾ ನಾಮನಿರ್ದೇಶಿತನಾಗಿದ್ದು, ಅದರಿಂದಾಗಿ ಸದಸ್ಯನಾಗಿರುವುದು ನಿಂತುಹೋಗಿದ್ದರೆ; ಅಥವಾ

(iii) 3ನೇ ಪ್ರಕರಣದ (3)ನೇ ಉಪಪ್ರಕರಣದ (ಸಿ) ಖಂಡದ ಮೇರೆಗೆ ಅವನು ಚುನಾಯಿತನಾಗಿರುವ ಸಂದರ್ಭದಲ್ಲಿ, ಸದರಿ ಖಂಡದಲ್ಲಿ ಉಲ್ಲೇಖಿಸಿದ ಸಂಸ್ಥೆಯ ಮುಖ್ಯಸ್ಥನಾಗಿ ಅವನು ಪದವನ್ನು ಧಾರಣ ಮಾಡಿರುವುದು ನಿಂತುಹೋಗಿದ್ದರೆ

– ತೆರವು ಮಾಡಿದ್ದಾನೆಂದು ಭಾವಿಸತಕ್ಕದ್ದು.

(4) ಪರಿಷತ್ತಿನಲ್ಲಿ ಉಂಟಾದ ಯಾವುದೇ ಆಕಸ್ಮಿಕ ಖಾಲಿಸ್ಥಾನವನ್ನು, ಸಂದರ್ಭಾನುಸಾರ, ಹೊಸ ಚುನಾವಣೆಯ ಮೂಲಕ ಅಥವಾ ನಾಮನಿರ್ದೇಶನದ ಮೂಲಕ ತುಂಬತಕ್ಕದ್ದು ಮತ್ತು ಆ ಖಾಲಿಸ್ಥಾನವನ್ನು ತುಂಬಲು ಹಾಗೆ ಚುನಾಯಿತನಾದ ಅಥವಾ ನಾಮನಿರ್ದೇಶಿತನಾದ ವ್ಯಕ್ತಿಯು ಯಾವ ಸದಸ್ಯನ ಸ್ಥಾನಕ್ಕೆ ಚುನಾಯಿತನಾಗಿದ್ದಾನೋ ಅಥವಾ ನಾಮನಿರ್ದೇಶನಗೊಂಡಿದ್ದಾನೆಯೋ ಅಂಥ ಸದಸ್ಯನ ಉಳಿದ ಅವಧಿಯವರೆಗೆ ಮಾತ್ರ ಪದಧಾರಣ ಮಾಡತಕ್ಕದ್ದು.

(5) ಪರಿಷತ್ತಿನ ಸದಸ್ಯರು ಮರು ಚುನಾವಣೆಗೆ ಅಥವಾ ಮರು ನಾಮನಿರ್ದೇಶನಕ್ಕೆ ಅರ್ಹರಾಗಿರತಕ್ಕದ್ದು, ಆದರೆ, ಅದು ನಿರಂತರ ಬರುವ ಮೂರು ಅವಧಿಗಳನ್ನು ಮೀರತಕ್ಕದ್ದಲ್ಲ.

**7. ಪರಿಷತ್ತಿನ, ಕಾರ್ಯನಿರ್ವಾಹಕ ಸಮಿತಿಯ ಅಥವಾ ಇತರ ಸಮಿತಿಗಳ ಕಾರ್ಯದ ಅಥವಾ ವ್ಯವಹರಣೆಯ ಸಿಂಧುತ್ವವು ಖಾಲಿಸ್ಥಾನ, ಇತ್ಯಾದಿಗಳ ಕಾರಣಗಳಿಂದ ಅಸಿಂಧುವಾಗತಕ್ಕದ್ದಲ್ಲ.–** ಪರಿಷತ್ತು ಅಥವಾ ಕಾರ್ಯನಿರ್ವಾಹಕ ಸಮಿತಿಯು ಅಥವಾ ಯಾವುದೇ ಇತರೆ ಸಮಿತಿಯು ಮಾಡಿದ ಯಾವುದೇ ಕಾರ್ಯವು ಅಥವಾ ವ್ಯವಹರಣೆಯು,–

(ಎ) ಪರಿಷತ್ತಿನಲ್ಲಿ, ಕಾರ್ಯನಿರ್ವಾಹಕ ಸಮಿತಿಯಲ್ಲಿ ಅಥವಾ ಯಾವುದೇ ಇತರೆ ಸಮಿತಿಯಲ್ಲಿ ಉಂಟಾದ ಯಾವುದೇ ಖಾಲಿಸ್ಥಾನದ ಅಥವಾ ಅದರ ರಚನೆಯಲ್ಲಿಯ ನ್ಯೂನತೆಯ; ಅಥವಾ

(ಬಿ) ಅದರ ಸದಸ್ಯನಾಗಿ ಕಾರ್ಯನಿರ್ವಹಿಸುವ ಯಾರೇ ವ್ಯಕ್ತಿಯ ಚುನಾವಣೆಯಲ್ಲಿನ ಅಥವಾ ನಾಮನಿರ್ದೇಶನದಲ್ಲಿನ ಯಾವುದೇ ನ್ಯೂನತೆಯ; ಅಥವಾ

(ಸಿ) ಪ್ರಕರಣದ ಗುಣಾವಗುಣಗಳಿಗೆ ಬಾಧಕವಾಗದ ಪ್ರಕ್ರಿಯೆಯಲ್ಲಿಯ ಯಾವುದೇ ಅಕ್ರಮತೆಯ

– ಕಾರಣ ಮಾತ್ರದಿಂದಲೇ ಅಸಿಂಧುವಾಗತಕ್ಕದ್ದಲ್ಲ.

**8. ಅಸಮರ್ಥತೆಗಳು.–** ಒಬ್ಬ ವ್ಯಕ್ತಿಯು ಪರಿಷತ್ತಿನ ಸದಸ್ಯನಾಗಿ, ಚುನಾವಣೆಗೆ ಅಥವಾ ನಾಮನಿರ್ದೇಶನಕ್ಕೆ ಅವನು,–

(ಎ) ಅವಿಮುಕ್ತ ದಿವಾಳಿಯಾಗಿದ್ದರೆ; ಅಥವಾ

(ಬಿ) ಯಾವುದೇ ಅಪರಾಧಕ್ಕಾಗಿ ಭಾರತದ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾಗಿ ಎರಡು ವರ್ಷಗಳಿಗೆ ಕಡಿಮೆ ಇಲ್ಲದ ಕಾರಾವಾಸದ ಶಿಕ್ಷೆಗೊಳಗಾಗಿದ್ದರೆ ಮತ್ತು ಅವನು ಬಿಡುಗಡೆಗೊಂಡಂದಿನಿಂದ ಇನ್ನೂ ಹೆಚ್ಚಿನ ಐದು ವರ್ಷಗಳ ಅವಧಿಯವರೆಗೆ ಅನರ್ಹನಾಗಿರುವುದು ಮುಂದುವರಿದಿದ್ದರೆ

– ಅರ್ಹನಾಗತಕ್ಕದ್ದಲ್ಲ.

**9. ಪರಿಷತ್ತಿನ ಸಭೆಗಳು.–** (1) ಪರಿಷತ್ತು ಪ್ರತಿ ಆರು ತಿಂಗಳಲ್ಲಿ ಕೊನೆಪಕ್ಷ ಒಂದು ಬಾರಿ, ವಿನಿಯಮನಗಳಲ್ಲಿ ನಿಯಮಿಸಬಹುದಾದಂಥ ಸಮಯದಲ್ಲಿ ಮತ್ತು ಸ್ಥಳದಲ್ಲಿ ಸಭೆ ಸೇರತಕ್ಕದ್ದು ಮತ್ತು ತನ್ನ ಸಭೆಗಳಲ್ಲಿ ನಡೆಸತಕ್ಕ ಕಾರ್ಯಕಲಾಪಗಳ ಸಂಬಂಧದಲ್ಲಿ ಅಂತಹ ಕಾರ್ಯವಿಧಾನ ನಿಯಮಗಳನ್ನು ಪಾಲಿಸತಕ್ಕದ್ದು.

(2) ವಿನಿಯಮನಗಳ ಮೂಲಕ ಅನ್ಯಥಾ ನಿಯಮಿಸಲಾಗಿರುವ ಹೊರತು, ಪರಿಷತ್ತಿನ ಸಭೆಗೆ ಒಂಬತ್ತು ಜನ ಸದಸ್ಯರ ಕೋರಂ ಇರತಕ್ಕದ್ದು ಮತ್ತು ಪರಿಷತ್ತಿನ ಎಲ್ಲಾ ಕಾರ್ಯಗಳನ್ನು ಹಾಜರಿದ್ದು ಮತ ನೀಡುವ ಸದಸ್ಯರ ಬಹುಮತದ ಮೂಲಕ ನಿರ್ಧರಿಸತಕ್ಕದ್ದು.

(3) ಮತಗಳು ಸಮಾನವಾಗಿ ಬಂದ ಸಂದರ್ಭದಲ್ಲಿ, ಅಧ್ಯಕ್ಷನು ಅಥವಾ ಅವನ ಅನುಪಸ್ಥಿತಿಯಲ್ಲಿ ಉಪಾಧ್ಯಕ್ಷನು ಅಥವಾ ಅವರಿಬ್ಬರ ಅನುಪಸ್ಥಿತಿಯಲ್ಲಿ ಸಭೆಯ ಅಧ್ಯಕ್ಷತೆ ವಹಿಸಿರುವ ಸದಸ್ಯನು ಎರಡನೆಯ ಅಥವಾ ನಿರ್ಣಾಯಕ ಮತವನ್ನು ಹೊಂದಿರತಕ್ಕದ್ದು ಮತ್ತು ಚಲಾಯಿಸತಕ್ಕದ್ದು.

**10. ಕಾರ್ಯನಿರ್ವಾಹಕ ಸಮಿತಿ ಮತ್ತು ಇತರ ಸಮಿತಿಗಳು.–** (1) ಪರಿಷತ್ತು ಈ ಅಧಿನಿಯಮದ ಮೇರೆಗಿನ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ ತನ್ನ ಸದಸ್ಯರೊಳಗಿಂದ ಒಂದು ಕಾರ್ಯನಿರ್ವಾಹಕ ಸಮಿತಿಯನ್ನು ರಚಿಸತಕ್ಕದ್ದು ಮತ್ತು ಪರಿಷತ್ತು ಅಗತ್ಯವೆಂದು ಭಾವಿಸಬಹುದಾದ ಸಾಮಾನ್ಯ ಮತ್ತು ವಿಶೇಷ ಉದ್ದೇಶಗಳಿಗಾಗಿ ಇತರ ಸಮಿತಿಗಳನ್ನು ಸಹ ರಚಿಸಬಹುದು.

(2) ಕಾರ್ಯನಿರ್ವಾಹಕ ಸಮಿತಿಯು ಪರಿಷತ್ತಿನ ಅಧ್ಯಕ್ಷನನ್ನು ಮತ್ತು ಉಪಾಧ್ಯಕ್ಷನನ್ನು ಒಳಗೊಂಡಿರತಕ್ಕದ್ದು, ಅವನು ಪದನಿಮಿತ್ತ ಸದಸ್ಯನಾಗಿರತಕ್ಕದ್ದು; ಮತ್ತು ಇತರ ಐವರು ಸದಸ್ಯರನ್ನು ಪರಿಷತ್ತು ತನ್ನ ಸದಸ್ಯರೊಳಗಿಂದ ಚುನಾಯಿಸತಕ್ಕದ್ದು.

(3) ಪರಿಷತ್ತಿನ ಅಧ್ಯಕ್ಷನು ಮತ್ತು ಉಪಾಧ್ಯಕ್ಷನು ಕ್ರಮವಾಗಿ ಕಾರ್ಯನಿರ್ವಾಹಕ ಸಮಿತಿಯ ಸಭಾಪತಿ ಮತ್ತು ಉಪ ಸಭಾಪತಿಯಾಗಿರತಕ್ಕದ್ದು.

(4) ಕಾರ್ಯನಿರ್ವಾಹಕ ಸಮಿತಿಯ ಸದಸ್ಯನು ಪರಿಷತ್ತಿನ ಸದಸ್ಯನಾಗಿ ಅವನ ಅವಧಿಯು ಮುಕ್ತಾಯವಾಗುವವರೆಗೆ ಪದಧಾರಣ ಮಾಡತಕ್ಕದ್ದು, ಆದರೆ ಪರಿಷತ್ತಿನ ಸದಸ್ಯನಾಗಿರುವುದಕ್ಕೆ ಒಳಪಟ್ಟು, ಅವನು ಮರು ಚುನಾವಣೆಗೆ ಅರ್ಹನಾಗಿರತಕ್ಕದ್ದು.

(5) ಕಾರ್ಯನಿರ್ವಾಹಕ ಸಮಿತಿಯು ಈ ಅಧಿನಿಯಮದ ಮೇರೆಗೆ ಅದಕ್ಕೆ ಪ್ರದತ್ತವಾದ ಮತ್ತು ವಿಧಿಸಲಾದ ಅಧಿಕಾರಗಳ ಮತ್ತು ಕರ್ತವ್ಯಗಳ ಜೊತೆಗೆ ವಿನಿಯಮನಗಳ ಮೂಲಕ ನಿಯಮಿಸಬಹುದಾದಂಥ ಅಧಿಕಾರಗಳನ್ನು ಅದು ಚಲಾಯಿಸತಕ್ಕದ್ದು ಮತ್ತು ಅಂತಹ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

**11. ಅಧ್ಯಕ್ಷನಿಗೆ, ಉಪಾಧ್ಯಕ್ಷನಿಗೆ ಮತ್ತು ಸದಸ್ಯರಿಗೆ ಫೀಜುಗಳು ಮತ್ತು ಭತ್ಯೆಗಳು.–** ಕೇಂದ್ರ ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ ಈ ಕುರಿತು ಪರಿಷತ್ತು, ನಿಗದಿಪಡಿಸಬಹುದಾದಂಥ ಫೀಜುಗಳನ್ನು ಮತ್ತು ಭತ್ಯೆಗಳನ್ನು ಪರಿಷತ್ತಿನ ಅಧ್ಯಕ್ಷನು, ಉಪಾಧ್ಯಕ್ಷನು ಮತ್ತು ಇತರ ಸದಸ್ಯರು ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು.

**12. ಅಧಿಕಾರಿಗಳು ಮತ್ತು ಇತರ ನೌಕರರು.–** (1) ಪರಿಷತ್ತು,–

(ಎ) ಒಬ್ಬ ರಿಜಿಸ್ಟ್ರಾರನನ್ನು ನೇಮಿಸತಕ್ಕದ್ದು, ಅವನು ಅದರ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸತಕ್ಕದ್ದು ಮತ್ತು ಪರಿಷತ್ತು ನಿರ್ಧರಿಸಿದರೆ ಅದರ ಖಜಾಂಜಿಯಾಗಿಯೂ ಕೂಡ ಕಾರ್ಯನಿರ್ವಹಿಸಬಹುದು;

(ಬಿ) ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ ಪರಿಷತ್ತು, ಅವಶ್ಯವೆಂದು ಭಾವಿಸುವ ಇತರ ಅಧಿಕಾರಿಗಳನ್ನು ಮತ್ತು ನೌಕರರನ್ನು ನೇಮಿಸತಕ್ಕದ್ದು;

(ಸಿ) ಕೇಂದ್ರ ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ, ಪರಿಷತ್ತಿನ ಅಧಿಕಾರಿಗಳ ಮತ್ತು ಇತರ ನೌಕರರ ಸಂಬಳವನ್ನು ಮತ್ತು ಭತ್ಯೆಗಳನ್ನು ಮತ್ತು ಇತರ ಸೇವಾ ಷರತ್ತುಗಳನ್ನು ನಿಗದಿಪಡಿಸತಕ್ಕದ್ದು.

(2) (1)ನೇ ಉಪಪ್ರಕರಣದ (ಎ) ಖಂಡದಲ್ಲಿ ಏನೇ ಒಳಗೊಂಡಿದ್ದರೂ, ಪರಿಷತ್ತು ಮೊದಲ ರಚನೆಯಾದಂದಿನಿಂದ ಮೊದಲಿನ ಮೂರು ವರ್ಷಗಳವರೆಗೆ ಪರಿಷತ್ತಿನ ರಿಜಿಸ್ಟ್ರಾರನು ಕೇಂದ್ರ ಸರ್ಕಾರವು ನೇಮಕಮಾಡಿದ ವ್ಯಕ್ತಿಯಾಗಿರತಕ್ಕದ್ದು, ಅವನು ಕೇಂದ್ರ ಸರ್ಕಾರದ ಇಷ್ಟಪರ್ಯಂತ ಪದಧಾರಣ ಮಾಡತಕ್ಕದ್ದು.

(3) ಈ ಪ್ರಕರಣದ ಮೇರೆಗೆ ನೇಮಕಗೊಂಡ ಎಲ್ಲಾ ವ್ಯಕ್ತಿಗಳು ಪರಿಷತ್ತಿನ ನೌಕರರಾಗಿರತಕ್ಕದ್ದು.

**13. ಪರಿಷತ್ತಿನ ಹಣಕಾಸು.–** (1) ಪರಿಷತ್ತಿನ ನಿರ್ವಹಣೆಹಗಾಗಿ ಮತ್ತು ಪರಿಷತ್ತಿನ ನಿಯಂತ್ರಣದಲ್ಲಿರಬೇಕಾದ ಒಂದು ನಿಧಿಯನ್ನು ಪರಿಷತ್ತು ಸ್ಥಾಪಿಸತಕ್ಕದ್ದು, ಪರಿಷತ್ತು ಸ್ವೀಕರಿಸಿದ ಎಲ್ಲಾ ಹಣವನ್ನು ಅದಕ್ಕೆ ಜಮೆ ಮಾಡತಕ್ಕದ್ದು ಮತ್ತು ಪರಿಷತ್ತು ಕ್ರಮಬದ್ಧವಾಗಿ ಮಾಡಿದ ಎಲ್ಲಾ ವೆಚ್ಚಗಳನ್ನು ಮತ್ತು ಹೊಣೆಗಾರಿಕೆಗಳನ್ನು ಅದರಿಂದ ಭರಿಸತಕ್ಕದ್ದು.

(2) ಪರಿಷತ್ತು, ನಿಧಿಯಲ್ಲಿ ತತ್ಕಾಲದಲ್ಲಿ ಜಮೆಯಿರುವ ಯಾವುದೇ ಹಣವನ್ನು ಯಾವುದೇ ಸರ್ಕಾರಿ ಭದ್ರತಾ ಪತ್ರದಲ್ಲಿ ಅಥವಾ ಕೇಂದ್ರ ಸರ್ಕಾರದಿಂದ ಅನುಮೋದಿತವಾದ ಯಾವುದೇ ಇತರ ಭದ್ರತಾ ಪತ್ರಗಳಲ್ಲಿ ತೊಡಗಿಸಬಹುದು.

(3) ಪರಿಷತ್ತು, ರಾಜಸ್ವದಿಂದ ಬಂಡವಾಳವನ್ನು ಪ್ರತ್ಯೇಕವಾಗಿ ತೋರಿಸಿ ನಿಧಿಯ ಸರಿಯಾದ ಲೆಕ್ಕಗಳನ್ನು ಇಡತಕ್ಕದ್ದು.

(4) ಪರಿಷತ್ತಿನ ವಾರ್ಷಿಕ ಲೆಕ್ಕಪತ್ರಗಳು ಪರಿಷತ್ತಿನಿಂದ ವಾರ್ಷಿಕವಾಗಿ ನೇಮಕಗೊಳ್ಳುವ ಲೆಕ್ಕ ಪರಿಶೋಧಕರಿಂದ ಪರಿಶೋಧನೆಗೆ ಒಳಪಟ್ಟಿರತಕ್ಕದ್ದು.

(5) ಪ್ರತೀ ವರ್ಷದ ಕೊನೆಯಲ್ಲಿ, ಕಾರ್ಯಸಾಧ್ಯವಾದಷ್ಟು ಬೇಗನೆ, ಆದರೆ ಮುಂಬರುವ ವರ್ಷದ ಸೆಪ್ಟೆಂಬರ್ 30ನೇ ದಿನಾಂಕವನ್ನು ಮೀರದಂತೆ ಪರಿಷತ್ತು ಪರಿಶೋಧಿತ ಲೆಕ್ಕಪತ್ರಗಳ ಒಂದು ಪ್ರತಿಯನ್ನು ರಾಜಪತ್ರದಲ್ಲಿ ಪ್ರಕಟಿಸುವಂತೆ ಮಾಡತಕ್ಕದ್ದು ಮತ್ತು ಆ ವರ್ಷದ ಪರಿಷತ್ತಿನ ವರದಿಯನ್ನು ಮತ್ತು ಸದರಿ ಲೆಕ್ಕಪತ್ರಗಳ ಮತ್ತು ವರದಿಯ ಪ್ರತಿಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು.

(6) ನಿಧಿಯು,–

(ಎ) ಅನುದಾನದ, ಕೊಡುಗೆಯ ಅಥವಾ ಠೇವಣಿಯ ಮೂಲಕ ಕೇಂದ್ರ ಸರ್ಕಾರದಿಂದ ಸ್ವೀಕರಿಸಿದ ಎಲ್ಲಾ ಹಣವನ್ನು;

(ಬಿ) ಈ ಅಧಿನಿಯಮದ ಮೇರೆಗೆ ಫೀಜಿನ ಮೂಲಕವಾಗಿಯಾಗಲಿ ಅಥವಾ ಬೇರೆ ರೀತಿಯಲ್ಲಾಗಲಿ ಸ್ವೀಕರಿಸಿದ ಯಾವುದೇ ಮೊತ್ತಗಳನ್ನು

– ಒಳಗೊಂಡಿರತಕ್ಕದ್ದು.

(7) ಪರಿಷತ್ತಿನಲ್ಲಿ ಜಮೆಯಲ್ಲಿರುವ ಎಲ್ಲಾ ಹಣವನ್ನು, ಕೂಡಲೇ ವಿನಿಯೋಗಿಸದಿದ್ದಲ್ಲಿ, ಭಾರತೀಯ ಸ್ಟೇಟ್ ಬ್ಯಾಂಕ್‌ನಲ್ಲಿ ಅಥವಾ ಬ್ಯಾಂಕಿಂಗ್ ಕಂಪನಿಗಳ (ಉದ್ಯಮಗಳ ಸ್ವಾಧೀನ ಮತ್ತು ವರ್ಗಾವಣೆ) ಅಧಿನಿಯಮ, 1970ರ (1970ರ 5) ಮೊದಲನೇ ಅನುಸೂಚಿಯ ಎರಡನೆಯ ಅಂಕಣದಲ್ಲಿ ನಿರ್ದಿಷ್ಟಪಡಿಸಿದ ಇತರೆ ಯಾವುದೇ ಬ್ಯಾಂಕಿನಲ್ಲಿ ಠೇವಣಿ ಇಡತಕ್ಕದ್ದು.

**14. ಭಾರತದಲ್ಲಿ ಪ್ರಾಧಿಕಾರಗಳು ನೀಡಿದ ಅರ್ಹತೆಗಳ ಮನ್ನಣೆ.–** (1) ಅನುಸೂಚಿಯಲ್ಲಿ ಒಳಗೊಂಡ ಅಥವಾ 15ನೇ ಪ್ರಕರಣದ ಮೇರೆಗೆ ಅಧಿಸೂಚಿಸಲಾದ ಅರ್ಹತೆಗಳು ಈ ಅಧಿನಿಯಮದ ಉದ್ದೇಶಗಳಿಗಾಗಿ ಮನ್ನಣೆ ಪಡೆದ ಅರ್ಹತೆಗಳಾಗಿರತಕ್ಕದ್ದು.

(2) ಅನುಸೂಚಿಯಲ್ಲಿ ಒಳಗೊಂಡಿರದ ವಾಸ್ತುಶಿಲ್ಪದ ಅರ್ಹತೆಯನ್ನು ನೀಡುವ ಭಾರತದಲ್ಲಿನ ಯಾವುದೇ ಪ್ರಾಧಿಕಾರವು ಅಂತಹ ಅರ್ಹತೆಗಳಿಗೆ ಮನ್ನಣೆ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಅರ್ಜಿ ಸಲ್ಲಿಸಬಹುದು ಮತ್ತು ಕೇಂದ್ರ ಸರ್ಕಾರವು ಪರಿಷತ್ತಿನ ಜೊತೆ ಸಮಾಲೋಚನೆ ನಡೆಸಿದ ನಂತರ ಅಂತಹ ಅರ್ಹತೆಯನ್ನು ಅದರಲ್ಲಿ ಸೇರಿಸಲು ಅನುಕೂಲವಾಗುವಂತೆ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಅನುಸೂಚಿಯನ್ನು ತಿದ್ದುಪಡಿ ಮಾಡಬಹುದು ಮತ್ತು ಅಂತಹ ಯಾವುದೇ ಅಧಿಸೂಚನೆಯಲ್ಲಿ ಒಂದು ನಿರ್ದಿಷ್ಟ ದಿನಾಂಕದ ನಂತರ ಅಂತಹ ಮನ್ನಣೆಯ ಅರ್ಹತೆಯನ್ನು ನೀಡಿದಾಗ ಮಾತ್ರ ಅದು ಮನ್ನಣೆ ಪಡೆದ ಅರ್ಹತೆ ಎಂಬುದನ್ನು ಘೋಷಿಸುವ ಅಂತಹ ವಾಸ್ತುಶಿಲ್ಪದ ಅರ್ಹತೆಯ ಎದುರು ಒಂದು ನಮೂದನ್ನು ಅನುಸೂಚಿಯಲ್ಲಿ ಮಾಡತಕ್ಕದ್ದೆಂದೂ ಸಹ ನಿರ್ದೇಶಿಸಬಹುದು:

ಪರಂತು, ಮೊದಲ ಪರಿಷತ್ತು ರಚಿತವಾಗುವವರೆಗೆ, ಕೇಂದ್ರ ಸರ್ಕಾರವು, ಮೇಲೆ ಹೇಳಿದ ಯಾವುದೇ ಅಧಿಸೂಚನೆಯನ್ನು ಹೊರಡಿಸುವುದಕ್ಕೆ ಮೊದಲು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಕೇಂದ್ರ ಸರ್ಕಾರವು ನೇಮಿಸುವ ಮೂವರು ಸದಸ್ಯರ ತಜ್ಞ ಸಮಿತಿಯೊಡನೆ ಸಮಾಲೋಚಿಸತಕ್ಕದ್ದು.

**15. ವಿದೇಶಗಳಲ್ಲಿನ ಪ್ರಾಧಿಕಾರಗಳು ನೀಡಿರುವ ವಾಸ್ತುಶಿಲ್ಪದ ಅರ್ಹತೆಗಳ ಮನ್ನಣೆ.–** (1) ಕೇಂದ್ರ ಸರ್ಕಾರವು, ಪರಿಷತ್ತಿನೊಡನೆ ಸಮಾಲೋಚನೆ ನಡೆಸಿದ ತರುವಾಯ, ಭಾರತದ ಹೊರಗಿನ ಯಾವುದೇ ವಿಶ್ವ ವಿದ್ಯಾನಿಲಯವು ಅಥವಾ ಯಾವುದೇ ರಾಷ್ಟ್ರದಲ್ಲಿಯ ಇತರ ಸಂಸ್ಥೆಯು ನೀಡಿರುವ ವಾಸ್ತುಶಿಲ್ಪದ ಅರ್ಹತೆಯನ್ನು, ಪಾರಸ್ಪರಿಕ ಆಧಾರದ ಮೇಲೆ ಅಂತಹ ವಾಸ್ತುಶಿಲ್ಪದ ಅರ್ಹತೆಯನ್ನು ಮಾನ್ಯ ಮಾಡುವಂತಹ ಒಂದು ಏರ್ಪಾಟು ಜಾರಿಯಲ್ಲಿಲ್ಲದಾಗ, ಈ ಅಧಿನಿಯಮದ ಉದ್ದೇಶಗಳಿಗಾಗಿ ಮನ್ನಣೆ ಪಡೆದ ಅರ್ಹತೆಯಾಗಿರತಕ್ಕದ್ದೆಂದು ಅಥವಾ ಒಂದು ನಿರ್ದಿಷ್ಟ ದಿನಾಂಕದ ತರುವಾಯ ಅಥವಾ ಒಂದು ನಿರ್ದಿಷ್ಟ ದಿನಾಂಕಕ್ಕಿಂತ ಮುಂಚಿತವಾಗಿ ನೀಡಿದ ಅರ್ಹತೆಯಾಗಿರತಕ್ಕದ್ದೆಂದು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದೇಶಿಸಬಹುದು:

ಪರಂತು, ಮೊದಲ ಪರಿಷತ್ತು ರಚಿತವಾಗುವವರೆಗೆ, ಕೇಂದ್ರ ಸರ್ಕಾರವು, ಮೇಲೆ ಹೇಳಿದ ಯಾವುದೇ ಅಧಿಸೂಚನೆಯನ್ನು ಹೊರಡಿಸುವುದಕ್ಕೆ ಮೊದಲು, 14ನೇ ಪ್ರಕರಣದ (2)ನೇ ಉಪಪ್ರಕರಣದ ಪರಂತುಕದ ಮೇರೆಗೆ ರಚಿತವಾದ ತಜ್ಞ ಸಮಿತಿಯೊಂದಿಗೆ ಸಮಾಲೋಚನೆ ಮಾಡತಕ್ಕದ್ದು.

(2) ಪರಿಷತ್ತು, ಭಾರತದ ಹೊರಗಿನ ಯಾವ ರಾಜ್ಯದ ಅಥವಾ ದೇಶದ ಕಾನೂನಿನ ಮೂಲಕ ವಾಸ್ತುಶಿಲ್ಪಿದ ಅರ್ಹತೆಗಳ ಮನ್ನಣೆಗಾಗಿ ಪಾರಸ್ಪರಿಕ ಯೋಜನೆಯನ್ನು ನಿಗದಿಪಡಿಸುವುದಕ್ಕಾಗಿ ವಾಸ್ತುಶಿಲ್ಪಿಗಳ ರಿಜಿಸ್ಟರನ್ನು ನಿರ್ವಹಿಸಿಕೊಂಡು ಬರುವ ಕಾರ್ಯವನ್ನು ವಹಿಸಲಾಗಿದೆಯೋ ಭಾರತದ

ಹೊರಗಿನ ಆ ಯಾವುದೇ ರಾಜ್ಯದಲ್ಲಿನ ಅಥವಾ ದೇಶದಲ್ಲಿನ ಪ್ರಾಧಿಕಾರದೊಂದಿಗೆ ಮಾತುಕತೆ ನಡೆಸಬಹುದು ಮತ್ತು ಅಂತಹ ಯಾವುದೇ ಏರ್ಪಾಟಿಗನುಸಾರವಾಗಿ ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಪರಿಷತ್ತು ನಿರ್ಣಯಿಸಿದಂತಹ ವಾಸ್ತುಶಿಲ್ಪದ ಅರ್ಹತೆಯನ್ನು ಮಾನ್ಯ ಮಾಡತಕ್ಕದ್ದೆಂದು, ಅದನ್ನು ಈ ಅಧಿನಿಯಮದ ಉದ್ದೇಶಗಳಿಗಾಗಿ ಮನ್ನಣೆ ಪಡೆದ ಅರ್ಹತೆಯೆಂಬುದಾಗಿ ಭಾವಿಸತಕ್ಕದ್ದೆಂದು ನಿರ್ದೇಶಿಸಬಹುದು ಮತ್ತು ಅಂತಹ ಯಾವುದೇ ಅಧಿಸೂಚನೆಯು ಅಂತಹ ವಾಸ್ತುಶಿಲ್ಪ ಅರ್ಹತೆಯನ್ನು ಒಂದು ನಿರ್ದಿಷ್ಟ ದಿನಾಂಕದ ನಂತರ ಅಥವಾ ನಿರ್ದಿಷ್ಟ ದಿನಾಂಕಕ್ಕಿಂತ ಮೊದಲು ನೀಡಿದಾಗ ಮಾತ್ರವೇ ಹಾಗೆ ಮನ್ನಣೆ ನೀಡಲಾಗಿದೆಯೆಂದು ಸಹ ನಿರ್ದೇಶಿಸಬಹುದು.

**16. ಅನುಸೂಚಿಯನ್ನು ತಿದ್ದುಪಡಿ ಮಾಡಲು ಕೇಂದ್ರ ಸರ್ಕಾರದ ಅಧಿಕಾರ.–** (1) 14ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಕೇಂದ್ರ ಸರ್ಕಾರವು ಪರಿಷತ್ತಿನೊಂದಿಗೆ ಸಮಾಲೋಚನೆ ನಡೆಸಿದ ನಂತರ, ರಾಜಪತ್ರದಲ್ಲಿ ಅಧಿಸೂಚನೆ ಮೂಲಕ ವಾಸ್ತುಶಿಲ್ಪ ಅರ್ಹತೆಗೆ ಸಂಬಂಧಿಸಿದಂತೆ ಒಂದು ನಮೂದನ್ನು ಅದರಲ್ಲಿ ಮಾಡಬೇಕೆಂದು ನಿರ್ದೇಶಿಸುವ ಮೂಲಕ ಅನುಸೂಚಿಯನ್ನು ತಿದ್ದುಪಡಿ ಮಾಡಬಹುದು.

**17. ಮನ್ನಣೆಯ ಪರಿಣಾಮ.–** ಯಾವುದೇ ಇತರೆ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಯಾವುದೇ ಮನ್ನಣೆ ಪಡೆದ ಅರ್ಹತೆಯು ರಿಜಿಸ್ಟರಿನಲ್ಲಿ ಸೇರಿಸುವುದಕ್ಕಾಗಿ ಸಾಕಷ್ಟು ಅರ್ಹತೆಯಾಗಿರತಕ್ಕದ್ದು.

**18. ಅಧ್ಯಯನ ಪಠ್ಯ ವಿಷಯಗಳಿಗೆ ಮತ್ತು ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಅಗತ್ಯ ಮಾಹಿತಿ ಪಡೆದುಕೊಳ್ಳಲು ಅಧಿಕಾರ.–** ಮನ್ನಣೆ ಪಡೆದ ಅರ್ಹತೆಗಳನ್ನು ನೀಡುವ ಭಾರತದಲ್ಲಿನ ಪ್ರತಿಯೊಂದು ಪ್ರಾಧಿಕಾರವು, ಅಂಥ ಅರ್ಹತೆಗಳನ್ನು ಪಡೆಯುವುದಕ್ಕಾಗಿ ತೆಗೆದುಕೊಳ್ಳುವ ಅಧ್ಯಯನ ಪಠ್ಯ ವಿಷಯಗಳನ್ನು ಮತ್ತು ಪರೀಕ್ಷೆಗಳನ್ನು, ಅಂಥ ಅಧ್ಯಯನ ಪಠ್ಯ ವಿಷಯಗಳನ್ನು ಮತ್ತು ಪರೀಕ್ಷೆಗಳನ್ನು ಯಾವ ವಯಸ್ಸಿನಲ್ಲಿ ತೆಗೆದುಕೊಳ್ಳಬೇಕೆಂಬ ಬಗ್ಗೆ ಮತ್ತು ಅಂತಹ ಅರ್ಹತೆಗಳನ್ನು ಪ್ರದಾನ ಮಾಡಲಾಗುತ್ತದೆಂಬ ಬಗ್ಗೆ ಮತ್ತು ಸಾಮಾನ್ಯವಾಗಿ ಅಂಥ ಅರ್ಹತೆ ಪಡೆಯುವುದಕ್ಕಾಗಿ ಇರುವ ಅಗತ್ಯತೆಗಳ ಬಗ್ಗೆ ಪರಿಷತ್ತು ಕಾಲಕಾಲಕ್ಕೆ ಅಗತ್ಯಪಡಿಸುವಂತಹ ಮಾಹಿತಿಯನ್ನು ಒದಗಿಸತಕ್ಕದ್ದು.

**19. ಪರೀಕ್ಷೆಗಳ ತಪಾಸಣೆ.–** (1) ಕಾರ್ಯನಿರ್ವಾಹಕ ಸಮಿತಿಯು, ಪರಿಷತ್ತು ರಚಿಸಿರುವ ವಿನಿಯಮನಗಳು ಯಾವುದಾದರೂ ಇದ್ದರೆ ಅವುಗಳಿಗೆ ಒಳಪಟ್ಟು, ವಾಸ್ತುಶಿಲ್ಪ ಶಿಕ್ಷಣ ನೀಡುತ್ತಿರುವ ಯಾವುದೇ ಕಾಲೇಜು ಅಥವಾ ಸಂಸ್ಥೆಯನ್ನು ತಪಾಸಣೆ ಮಾಡಲು ಅಥವಾ ಅಂತಹ ಕಾಲೇಜು ಅಥವಾ ಸಂಸ್ಥೆಯು ನೀಡಿದ ವಾಸ್ತುಶಿಲ್ಪ ಅರ್ಹತೆಗಳಿಗೆ, ಕೇಂದ್ರ ಸರ್ಕಾರವು ಮನ್ನಣೆ ನೀಡುವುದಕ್ಕೆ ಶಿಫಾರಸ್ಸು ಮಾಡುವ ಉದ್ದೇಶಕ್ಕಾಗಿ, ಆ ಯಾವುದೇ ಕಾಲೇಜು ಅಥವಾ ಸಂಸ್ಥೆಯು ನಡೆಸುವ ಯಾವುದೇ ಪರೀಕ್ಷೆಯ ತಪಾಸಣೆ ಮಾಡಲು ಅವಶ್ಯವೆಂದು ಭಾವಿಸುವಷ್ಟು ಸಂಖ್ಯೆಯ ಪರಿಶೀಲಕರನ್ನು ನೇಮಕ ಮಾಡತಕ್ಕದ್ದು.

(2) ಪರಿಶೀಲಕರು, ಯಾವುದೇ ತರಬೇತಿ ಅಥವಾ ಪರೀಕ್ಷೆ ನಡೆಸುವಾಗ ಹಸ್ತಕ್ಷೇಪ ಮಾಡತಕ್ಕದ್ದಲ್ಲ, ಆದರೆ ಸಿಬ್ಬಂದಿ, ಸಲಕರಣೆ, ಸ್ಥಳಾವಕಾಶ, ತರಬೇತಿ ಮತ್ತು ಅಂತಹ ಶಿಕ್ಷಣ ನೀಡುವುದಕ್ಕಾಗಿ ವಿನಿಯಮನಗಳ ಮೂಲಕ ನಿಯಮಿಸಬಹುದಾದಂತಹ ಇತರ ಸೌಕರ್ಯಗಳನ್ನೂ ಒಳಗೊಂಡಂತೆ ವಾಸ್ತುಶಿಲ್ಪ ಶಿಕ್ಷಣದ ಗುಣಮಟ್ಟಗಳ ಸಮರ್ಪಕತೆ ಬಗ್ಗೆ ಅಥವಾ ಅವರು ಪರಿಶೀಲಿಸುವ ಪ್ರತಿಯೊಂದು ಪರೀಕ್ಷೆಯ ಸಮರ್ಪಕತೆಯ ಬಗ್ಗೆ ಕಾರ್ಯನಿರ್ವಾಹಕ ಸಮಿತಿಗೆ ವರದಿಯನ್ನು ಮಾಡತಕ್ಕದ್ದು.

(3) ಕಾರ್ಯನಿರ್ವಾಹಕ ಸಮಿತಿಯು, ಅಂತಹ ವರದಿಯ ಪ್ರತಿಯನ್ನು ಕಾಲೇಜು ಅಥವಾ ಸಂಸ್ಥೆಗೆ ಕಳುಹಿಸಿಕೊಡತಕ್ಕದ್ದು ಮತ್ತು ಆ ಕಾಲೇಜಿನ ಅಥವಾ ಸಂಸ್ಥೆಯ ಷರಾಗಳು ಯಾವುವಾದರೂ ಇದ್ದಲ್ಲಿ, ಅವುಗಳೊಂದಿಗೆ ವರದಿ ಪ್ರತಿಗಳನ್ನು ಸಹ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು.

**20. ಮನ್ನಣೆಯನ್ನು ಹಿಂತೆಗೆದುಕೊಳ್ಳುವುದು.–** (1) ಕಾರ್ಯನಿರ್ವಾಹಕ ಸಮಿತಿಯು ವರದಿಯನ್ನು ಸಲ್ಲಿಸಿದ ನಂತರ ಪರಿಷತ್ತಿಗೆ,–

(ಎ) ಕೈಗೊಳ್ಳಬೇಕಾದ ಅಧ್ಯಯನ ಪಠ್ಯ ವಿಷಯವು ಮತ್ತು ಪರೀಕ್ಷೆಯು ಅಥವಾ ಯಾವುದೇ ಕಾಲೇಜು ಅಥವಾ ಸಂಸ್ಥೆಯು ನಡೆಸುವ ಯಾವುದೇ ಪರೀಕ್ಷೆಯಲ್ಲಿ ಅಭ್ಯರ್ಥಿಗಳಲ್ಲಿ ಇರಬೇಕೆಂದು ಅಪೇಕ್ಷಿಸಲಾದ ಪ್ರಾವೀಣ್ಯತೆ, ಅಥವಾ

(ಬಿ) ಅಂಥ ಕಾಲೇಜಿನಲ್ಲಿ ಅಥವಾ ಸಂಸ್ಥೆಯಲ್ಲಿ ಒದಗಿಸಲಾದ ಸಿಬ್ಬಂದಿ, ಸಲಕರಣೆ, ಸ್ಥಳಾವಕಾಶ, ತರಬೇತಿ ಮತ್ತು ಸಿಬ್ಬಂದಿಗಾಗಿ ಮತ್ತು ತರಬೇತಿಗಾಗಿ ಒದಗಿಸಲಾದ ಇತರ ಸೌಕರ್ಯಗಳು

– ವಿನಿಯಮನಗಳಲ್ಲಿ ಗೊತ್ತುಪಡಿಸಿದ ಮಾನದಂಡಗಳಿಗೆ ಅನುಸಾರವಾಗಿಲ್ಲವೆಂದು ಪರಿಷತ್ತಿಗೆ ಕಂಡುಬಂದರೆ, ಆ ಕುರಿತು ಸಮುಚಿತ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸತಕ್ಕದ್ದು.

(2) ಅಂತಹ ಮನವಿಯನ್ನು ಪರಿಶೀಲಿಸಿದ ನಂತರ, ಸಮುಚಿತ ಸರ್ಕಾರವು, ಸಂಬಂಧಪಟ್ಟ ಕಾಲೇಜಿಗೆ ಅಥವಾ ಸಂಸ್ಥೆಗೆ, ತಾನು ಮಾಡಲು ಇಚ್ಛಿಸುವ ಷರಾಗಳೊಂದಿಗೆ, ಸಂದರ್ಭಾನುಸಾರ, ಅಂತಹ ಕಾಲೇಜು ಅಥವಾ ಸಂಸ್ಥೆಯು, ತನ್ನ ವಿವರಣೆಯನ್ನು ಯಾವ ಅವಧಿಯೊಳಗೆ ಸಮುಚಿತ ಸರ್ಕಾರಕ್ಕೆ ಸಲ್ಲಿಸಬೇಕೆಂಬ ಮಾಹಿತಿಯೊಂದಿಗೆ ಕಳುಹಿಸಿಕೊಡತಕ್ಕದ್ದು.

(3) ನಿಗದಿತ ಅವಧಿಯೊಳಗೆ ವಿವರಣೆಯನ್ನು ಸ್ವೀಕರಿಸಿದ ನಂತರ ಅಥವಾ ಯಾವುದೇ ವಿವರಣೆ ಸಲ್ಲಿಸದೆ ಇದ್ದಲ್ಲಿ ಆಗ, ಆ ಅವಧಿಯು ಮುಕ್ತಾಯವಾದ ನಂತರ, ರಾಜ್ಯ ಸರ್ಕಾರವು, (5)ನೇ ಉಪ ಪ್ರಕರಣದ (ಬಿ) ಖಂಡದಲ್ಲಿ ಉಲ್ಲೇಖಿಸಿದ ಕಾಲೇಜಿನ ಅಥವಾ ಸಂಸ್ಥೆಯ ಸಂಬಂಧದಲ್ಲಿ ಕೇಂದ್ರ ಸರ್ಕಾರಕ್ಕೆ ತನ್ನ ಶಿಫಾರಸ್ಸುಗಳನ್ನು ಮಾಡತಕ್ಕದ್ದು.

(4) ಕೇಂದ್ರ ಸರ್ಕಾರವು,–

(ಎ) (3)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಕಾಲೇಜಿಗೆ ಅಥವಾ ಸಂಸ್ಥೆಗೆ ಸಂಬಂಧಿಸಿದಂತೆ, ತಾನು ಸೂಕ್ತವೆಂದು ಭಾವಿಸುವ ಇನ್ನೂ ಹೆಚ್ಚಿನ ವಿಚಾರಣೆ ಯಾವುದಾದರೂ ಇದ್ದರೆ ಅದನ್ನು ನಡೆಸಿದ ನಂತರ, ಅಥವಾ

(ಬಿ) (5)ನೇ ಉಪಪ್ರಕರಣದ (ಎ) ಖಂಡದಲ್ಲಿ ಉಲ್ಲೇಖಿಸಿದ ಕಾಲೇಜು ಅಥವಾ ಸಂಸ್ಥೆಯಿಂದ ವಿವರಣೆಯನ್ನು ಸ್ವೀಕರಿಸಿದ ನಂತರ, ಅಥವಾ ನಿಗದಿಪಡಿಸಿದ ಅವಧಿಯೊಳಗೆ ಯಾವುದೇ ವಿವರಣೆಯನ್ನು ಸಲ್ಲಿಸದಿದ್ದರೆ, ಆಗ ಆ ಅವಧಿಯು ಮುಕ್ತಾಯವಾದ ನಂತರ

– ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಒಂದು ನಿರ್ದಿಷ್ಟ ದಿನಾಂಕಕ್ಕೆ ಮುಂಚೆ ನೀಡಿದಾಗ ಮಾತ್ರವೇ ಅದು ಮನ್ನಣೆ ಪಡೆದ ಅರ್ಹತೆಯಾಗುತ್ತದೆ ಎಂಬುದನ್ನು ಘೋಷಿಸುವ, ಸಂದರ್ಭಾನುಸಾರ ಅಂತಹ ಕಾಲೇಜು ಅಥವಾ ಸಂಸ್ಥೆಯು ನೀಡಿರುವ ವಾಸ್ತುಶಿಲ್ಪ ಅರ್ಹತೆಗೆ ಸಂಬಂಧಿಸಿ ಅನುಸೂಚಿಯಲ್ಲಿ ಒಂದು ನಮೂದನ್ನು ಮಾಡತಕ್ಕದ್ದೆಂದು ನಿರ್ದೇಶಿಸಬಹುದು ಮತ್ತು ಅನುಸೂಚಿಯನ್ನು ತದನುಸಾರವಾಗಿ ತಿದ್ದುಪಡಿ ಮಾಡಲಾಗಿದೆ ಎಂಬುದಾಗಿ ಭಾವಿಸತಕ್ಕದ್ದು.

(5) ಈ ಪ್ರಕರಣದ ಉದ್ದೇಶಗಳಿಗಾಗಿ, "ಸಮುಚಿತ ಸರ್ಕಾರ" ಎಂದರೆ,–

(ಎ) ಸಂಸತ್ತಿನ ಅಧಿನಿಯಮದ ಮೇರೆಗೆ ಸ್ಥಾಪಿತವಾದ ಅಥವಾ ಕೇಂದ್ರ ಸರ್ಕಾರವು ನಿರ್ವಹಿಸಿದ, ನಿಯಂತ್ರಿಸಿದ ಅಥವಾ ಹಣಕಾಸು ಒದಗಿಸಿದ ಯಾವುದೇ ಕಾಲೇಜು ಅಥವಾ ಸಂಸ್ಥೆಯ ಸಂಬಂಧದಲ್ಲಿ, ಕೇಂದ್ರ ಸರ್ಕಾರ ಎಂದು ಅರ್ಥ, ಮತ್ತು

(ಬಿ) ಯಾವುದೇ ಇತರ ಸಂದರ್ಭದಲ್ಲಿ, ರಾಜ್ಯ ಸರ್ಕಾರ ಎಂದು ಅರ್ಥ.

**21. ವಾಸ್ತುಶಿಲ್ಪ ಶಿಕ್ಷಣದ ಕನಿಷ್ಠ ಮಾನದಂಡ.–** ಭಾರತದಲ್ಲಿ ಕಾಲೇಜುಗಳು ಅಥವಾ ಸಂಸ್ಥೆಗಳು ಮನ್ನಣೆ ಪಡೆದ ಅರ್ಹತೆಗಳನ್ನು ನೀಡಲು ಅಗತ್ಯವಾದ, ವಾಸ್ತುಶಿಲ್ಪ ಶಿಕ್ಷಣದ ಕನಿಷ್ಠ ಮಾನದಂಡಗಳನ್ನು ಪರಿಷತ್ತು ಗೊತ್ತುಪಡಿಸಬಹುದು.

**22. ವೃತ್ತೀಯ ನಡತೆ.–** (1) ಪರಿಷತ್ತು, ವಾಸ್ತುಶಿಲ್ಪಿಗಳಿಗೆ ವೃತ್ತೀಯ ನಡತೆಯ ಮತ್ತು ಶಿಷ್ಟಾಚಾರದ ಮಾನದಂಡವನ್ನು ಮತ್ತು ನೀತಿ ಸಂಹಿತೆಯನ್ನು ವಿನಿಯಮನಗಳ ಮೂಲಕ ನಿಯಮಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಪರಿಷತ್ತು ರಚಿಸಿರುವ ವಿನಿಯಮನಗಳು, ಅದರ ಯಾವುದೇ ಉಲ್ಲಂಘನೆಗಳು ಯಾವುದೇ ವೃತ್ತೀಯ ಸಂಬಂಧದಲ್ಲಿ ಹೇಯವಾದ ನಡತೆಯಾಗುತ್ತದೆಯೋ,

ಅಂದರೆ, ವೃತ್ತೀಯ ದುರ್ನಡತೆಯಾಗುತ್ತದೆಯೋ ಆ ಯಾವುದೇ ಉಲ್ಲಂಘನೆಗಳನ್ನು ನಿರ್ದಿಷ್ಟಪಡಿಸಬಹುದು, ಮತ್ತು ಅಂತಹ ಉಪಬಂಧವು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ ಪರಿಣಾಮಕಾರಿಯಾಗಿರತಕ್ಕದ್ದು.

## ಅಧ್ಯಾಯ – III
## ವಾಸ್ತುಶಿಲ್ಪಿಗಳ ನೋಂದಣಿ

**23. ರಿಜಿಸ್ಟರನ್ನು ಸಿದ್ಧಪಡಿಸುವುದು ಮತ್ತು ನಿರ್ವಹಿಸುವುದು.–** (1) ಕೇಂದ್ರ ಸರ್ಕಾರವು, ಆದಷ್ಟು ಬೇಗನೆ, ಭಾರತದ ವಾಸ್ತುಶಿಲ್ಪಿಗಳ ಒಂದು ರಿಜಿಸ್ಟರನ್ನು, ಇದರಲ್ಲಿ ಇನ್ನು ಮುಂದೆ ಉಪಬಂಧಿಸಿರುವ ರೀತಿಯಲ್ಲಿ ಸಿದ್ಧಪಡಿಸುವಂತೆ ಮಾಡತಕ್ಕದ್ದು.

(2) ಪರಿಷತ್ತು ರಚನೆಯಾದ ಮೇಲೆ ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ, ರಿಜಿಸ್ಟರನ್ನು ನಿರ್ವಹಿಸಿಕೊಂಡು ಬರುವ ಕರ್ತವ್ಯವನ್ನು ವಹಿಸಿಕೊಳ್ಳತಕ್ಕದ್ದು.

(3) ರಿಜಿಸ್ಟರು ಈ ಕೆಳಕಂಡ ವಿವರಗಳನ್ನು ಒಳಗೊಂಡಿರತಕ್ಕದ್ದು, ಎಂದರೆ,–

(ಎ) ವಾಸ್ತುಶಿಲ್ಪಿಯ ಪೂರ್ಣ ಹೆಸರು ಹಾಗೂ ಜನನ ದಿನಾಂಕ, ರಾಷ್ಟ್ರೀಯತೆ, ವಾಸಸ್ಥಳದ ವಿಳಾಸ;

(ಬಿ) ನೋಂದಣಿಗಾಗಿ ಅವನ ಅರ್ಹತೆ ಮತ್ತು ಆ ಅರ್ಹತೆಯನ್ನು ಪಡೆದ ದಿನಾಂಕ ಮತ್ತು ಅದನ್ನು ಪ್ರದಾನ ಮಾಡಿದ ಪ್ರಾಧಿಕಾರ;

(ಸಿ) ರಿಜಿಸ್ಟರಿಗೆ ಅವನ ಹೆಸರನ್ನು ಮೊದಲು ನಮೂದಿಸಿದ ದಿನಾಂಕ;

(ಡಿ) ಅವನ ವೃತ್ತೀಯ ವಿಳಾಸ; ಮತ್ತು

(ಇ) ನಿಯಮಗಳ ಮೂಲಕ ನಿಯಮಿಸಬಹುದಾದಂಥ ಇನ್ನೂ ಹೆಚ್ಚಿನ ವಿವರಗಳು.

**24. ಮೊದಲ ಬಾರಿಗೆ ರಿಜಿಸ್ಟರನ್ನು ಸಿದ್ಧಪಡಿಸುವುದು.–** (1) ವಾಸ್ತುಶಿಲ್ಪಿಗಳ ರಿಜಿಸ್ಟರನ್ನು ಮೊದಲ ಸಲ ಸಿದ್ಧಪಡಿಸುವ ಉದ್ದೇಶಗಳಿಗಾಗಿ, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ ವಾಸ್ತುಶಿಲ್ಪದಲ್ಲಿ ಜ್ಞಾನ ಅಥವಾ ಅನುಭವ ಹೊಂದಿರುವಂತಹ ಮೂವರು ವ್ಯಕ್ತಿಗಳುಳ್ಳ ಒಂದು ನೋಂದಣಿ ನ್ಯಾಯಾಧಿಕರಣವನ್ನು ರಚಿಸತಕ್ಕದ್ದು ಮತ್ತು 12ನೇ ಪ್ರಕರಣದ ಮೇರೆಗೆ ನೇಮಕಗೊಂಡ ರಿಜಿಸ್ಟ್ರಾರನು ನ್ಯಾಯಾಧಿಕರಣದ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸತಕ್ಕದ್ದು.

(2) ಕೇಂದ್ರ ಸರ್ಕಾರವು, ಅದೇ ಅಥವಾ ಅಂಥದೇ ಅಧಿಸೂಚನೆಯ ಮೂಲಕ, ನೋಂದಣಿಗಾಗಿನ ಅರ್ಜಿಯನ್ನು ಯಾವ ದಿನಾಂಕದಂದು ಅಥವಾ ಯಾವ ದಿನಾಂಕಕ್ಕೆ ಮೊದಲು, ನಿಯಮಗಳ ಮೂಲಕ ನಿಯಮಿಸಬಹುದಾದಂಥ ಶುಲ್ಕದೊಂದಿಗೆ ನೋಂದಣಿ ನ್ಯಾಯಾಧಿಕರಣಕ್ಕೆ ಸಲ್ಲಿಸಬೇಕೋ ಆ ದಿನಾಂಕವನ್ನು ಗೊತ್ತುಪಡಿಸತಕ್ಕದ್ದು.

(3) ಗೊತ್ತುಪಡಿಸಿದ ದಿನಾಂಕದಂದು ಅಥವಾ ಅದಕ್ಕಿಂತ ಮೊದಲು ಸ್ವೀಕರಿಸಿದ ಪ್ರತಿಯೊಂದು ಅರ್ಜಿಯನ್ನು ನೋಂದಣಿ ನ್ಯಾಯಾಧಿಕರಣವು ಪರಿಶೀಲಿಸತಕ್ಕದ್ದು ಮತ್ತು 25ನೇ ಪ್ರಕರಣದ ಮೇರೆಗೆ ಅರ್ಜಿದಾರನು ಅರ್ಹನಾಗಿದ್ದಾನೆಂದು ಅದಕ್ಕೆ ಮನದಟ್ಟಾದರೆ ರಿಜಿಸ್ಟರಿನಲ್ಲಿ ಅರ್ಜಿದಾರನ ಹೆಸರನ್ನು ನಮೂದಿಸುವಂತೆ ನಿರ್ದೇಶಿಸತಕ್ಕದ್ದು.

(4) ಹಾಗೆ ಸಿದ್ಧಪಡಿಸಿದ ಮೊದಲ ರಿಜಿಸ್ಟರನ್ನು ಕೇಂದ್ರ ಸರ್ಕಾರವು ಅನಂತರ ನಿರ್ದೇಶಿಸಬಹುದಾದ ರೀತಿಯಲ್ಲಿ ಪ್ರಕಟಿಸತಕ್ಕದ್ದು ಮತ್ತು ಹಾಗೆ ಪ್ರಕಟಿಸಿದ ರಿಜಿಸ್ಟರಿನಲ್ಲಿ ವ್ಯಕ್ತವಾದ ಅಥವಾ ಇಂಗಿತವಾದ ನೋಂದಣಿ ನ್ಯಾಯಾಧಿಕರಣದ ನಿರ್ಣಯದಿಂದಾಗಿ ಬಾಧಿತನಾದ ಯಾರೇ ವ್ಯಕ್ತಿಯು, ಅಂತಹ ಪ್ರಕಟಣೆಯ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ, ಅಂತಹ ನಿರ್ಣಯದ ವಿರುದ್ಧ ಕೇಂದ್ರ ಸರ್ಕಾರವು ಈ ಬಗ್ಗೆ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನೇಮಕ ಮಾಡಿದ ಪ್ರಾಧಿಕಾರಕ್ಕೆ ಅಪೀಲು ಮಾಡಿಕೊಳ್ಳಬಹುದು.

(5) (4)ನೇ ಉಪಪ್ರಕರಣದ ಮೇರೆಗೆ ನೇಮಕಗೊಂಡ ಪ್ರಾಧಿಕಾರವು, ಬಾಧಿತನಾದ ವ್ಯಕ್ತಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ನೀಡಿದ ನಂತರ ಮತ್ತು ಸಂಬಂಧಿಸಿದ ದಾಖಲೆಗಳನ್ನು ತರಿಸಿಕೊಂಡ ನಂತರ, ಅದು ಯುಕ್ತವೆಂದು ಭಾವಿಸಬಹುದಾದಂಥ ಆದೇಶವನ್ನು ಮಾಡತಕ್ಕದ್ದು.

(6) ರಿಜಿಸ್ಟ್ರಾರನು, (4)ನೇ ಉಪಪ್ರಕರಣದ ಮೇರೆಗೆ ನೇಮಕಗೊಂಡ ಪ್ರಾಧಿಕಾರದ ನಿರ್ಣಯಕ್ಕೆ ಅನುಸಾರವಾಗಿ ಅವಶ್ಯಕವಾದಲ್ಲಿ ರಿಜಿಸ್ಟರನ್ನು ತಿದ್ದುಪಡಿ ಮಾಡತಕ್ಕದ್ದು.

(7) ರಿಜಿಸ್ಟರಿನಲ್ಲಿ ಯಾರ ಹೆಸರನ್ನು ನಮೂದಿಸಲಾಗಿದೆಯೋ ಆ ಪ್ರತಿಯೊಬ್ಬ ವ್ಯಕ್ತಿಗೆ ನಿಯಮಗಳ ಮೂಲಕ ನಿಯಮಿಸಬಹುದಾದಂಥ ನಮೂನೆಯಲ್ಲಿ ನೋಂದಣಿ ಪ್ರಮಾಣಪತ್ರವನ್ನು ನೀಡತಕ್ಕದ್ದು.

(8) ಪರಿಷತ್ತಿನ ರಚನೆಯಾದ ಮೇಲೆ ರಿಜಿಸ್ಟರನ್ನು ಅದರ ಅಭಿರಕ್ಷೆಗೆ ಕೊಡತಕ್ಕದ್ದು, ಮತ್ತು ಕೇಂದ್ರ ಸರ್ಕಾರವು ಮೊದಲ ರಿಜಿಸ್ಟರಿನಲ್ಲಿ ನೋಂದಣಿಗೆ ಸಂಬಂಧಿಸಿದ ಅರ್ಜಿ ಶುಲ್ಕಗಳ ಪೂರ್ಣ ಹಣವನ್ನು ಅಥವಾ ಯಾವುದೇ ನಿರ್ದಿಷ್ಟ ಭಾಗವನ್ನು ಪರಿಷತ್ತಿನ ಲೆಕ್ಕಕ್ಕೆ ಸಂದಾಯ ಮಾಡತಕ್ಕದೆಂಬುದನ್ನು ನಿರ್ದೇಶಿಸಬಹುದು.

**25. ರಿಜಿಸ್ಟರಿನಲ್ಲಿ ನಮೂದಿಸುವುದಕ್ಕೆ ಅರ್ಹತೆ.–** ಭಾರತದಲ್ಲಿ ವಾಸಿಸುವ ಅಥವಾ ವಾಸ್ತುಶಿಲ್ಪಿ ವೃತ್ತಿಯನ್ನು ನಡೆಸುವ ವ್ಯಕ್ತಿಯು ನಿಯಮಗಳ ಮೂಲಕ ನಿಯಮಿಸಬಹುದಾದ ಶುಲ್ಕವನ್ನು ಸಂದಾಯ ಮಾಡಿ ರಿಜಿಸ್ಟರಿನಲ್ಲಿ ತನ್ನ ಹೆಸರನ್ನು ನಮೂದಿಸಿಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು, ಮತ್ತು ಆತನು,–

(ಎ) ಮನ್ನಣೆ ಪಡೆದ ಅರ್ಹತೆಯನ್ನು ಹೊಂದಿರಬೇಕು; ಅಥವಾ

(ಬಿ) ಅಂಥ ಅರ್ಹತೆಯನ್ನು ಹೊಂದಿರುವಲ್ಲಿ, ಆದರೆ ಭಾರತದ ನಾಗರಿಕನಾಗಿದ್ದು, 24ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಗೊತ್ತುಪಡಿಸಲಾದ ದಿನಾಂಕಕ್ಕಿಂತ ಮುಂಚೆ, ಐದು ವರ್ಷಗಳಿಗಿಂತ ಕಡಿಮೆಯಿಲ್ಲದ ಅವಧಿಯವರೆಗೆ ವಾಸ್ತುಶಿಲ್ಪಿಯಾಗಿ ವೃತ್ತಿಯಲ್ಲಿ ನಿರತನಾಗಿರಬೇಕು, ಅಥವಾ

(ಸಿ) ನಿಯಮಗಳ ಮೂಲಕ ನಿಯಮಿಸಬಹುದಾದಂಥ ಇತರ ಅರ್ಹತೆಗಳನ್ನು ಹೊಂದಿರಬೇಕು:

ಪರಂತು, ಭಾರತದ ನಾಗರಿಕನಾಗಿರದ ಯಾರೇ ವ್ಯಕ್ತಿಯು,–

(ಎ) ಅಂತಹ ವ್ಯಕ್ತಿಯು, ಸಂಬಂಧಪಡುವಂಥ ಭಾರತದ ಹೊರಗಿನ ದೇಶದ ಕಾನೂನು ಮತ್ತು ಆಚರಣೆಯ ಮೂಲಕ, ಆ ಹೊರಗಿನ ದೇಶದಲ್ಲಿ ವಾಸ್ತುಶಿಲ್ಪದ ಅರ್ಹತೆಯನ್ನು ಹೊಂದಿರುವ ಭಾರತದ ನಾಗರಿಕರು, ಅಂತಹ ದೇಶದಲ್ಲಿ ವಾಸ್ತುಶಿಲ್ಪಿಯಾಗಿ ನಮೂದಿಸಿಕೊಳ್ಳಲು ಮತ್ತು ಆ ವೃತ್ತಿ ನಡೆಸಲು ಅನುಮತಿ ಹೊಂದಿದ್ದ ಹೊರತು 15ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಮನ್ನಣೆ ಪಡೆದ, ಅಥವಾ

(ಬಿ) ಕೇಂದ್ರ ಸರ್ಕಾರವು, ಪರಸ್ಪರ ಏರ್ಪಾಟಿಗೆ ಅನುಸಾರವಾಗಿ ಅಥವಾ ಅನ್ಯಥಾ 15ನೇ ಪ್ರಕರಣದ (2)ನೇ ಉಪ ಪ್ರಕರಣದ ಮೇರೆಗೆ ಆಧರಿಸುವ ಯೋಜನೆಗೆ ಅನುಸಾರವಾಗಿ ಆ ಅರ್ಹತೆಯನ್ನು ಮನ್ನಣೆ ಪಡೆದ ಅರ್ಹತೆ ಎಂಬುದಾಗಿ ಘೋಷಿಸಿರುವ ಹೊರತು

– ಅರ್ಹತೆಯ ಬಲದಿಂದಾಗಿ ನೋಂದಣಿಗೆ ಹಕ್ಕುಳ್ಳವನಾಗಿರತಕ್ಕದ್ದಲ್ಲ.

**26. ತರುವಾಯದ ನೋಂದಣಿಗಳ ಬಗ್ಗೆ ಪ್ರಕ್ರಿಯೆ.–** (1) ವಾಸ್ತುಶಿಲ್ಪಿಗಳ ಮೊದಲ ರಿಜಿಸ್ಟರಿನಲ್ಲಿ ನೋಂದಣಿಗಾಗಿ ಅರ್ಜಿಗಳನ್ನು ಸ್ವೀಕರಿಸಲು ಗೊತ್ತುಪಡಿಸಿದ ದಿನಾಂಕದ ನಂತರ, ನೋಂದಣಿಗಾಗಿನ ಎಲ್ಲ ಅರ್ಜಿಗಳನ್ನು ಪರಿಷತ್ತಿನ ರಿಜಿಸ್ಟ್ರಾರರಿಗೆ ಸಂಭೋದಿಸಿ ಕಳುಹಿಸತಕ್ಕದ್ದು ಮತ್ತು ನಿಯಮಗಳ ಮೂಲಕ ನಿಯಮಿಸಬಹುದಾದಂಥ ಶುಲ್ಕವು ಆ ಅರ್ಜಿಯ ಜೊತೆಗೆ ಇರತಕ್ಕದ್ದು.

(2) ಅಂತಹ ಅರ್ಜಿಯನ್ನು ಸ್ವೀಕರಿಸಿದ ನಂತರ ಅರ್ಜಿದಾರನು ತನ್ನ ಹೆಸರನ್ನು ರಿಜಿಸ್ಟರಿನಲ್ಲಿ ನಮೂದಿಸಿಕೊಳ್ಳಲು ಹಕ್ಕುಳ್ಳವನಾಗಿದ್ದಾನೆಂದು ರಿಜಿಸ್ಟ್ರಾರನು ಅಭಿಪ್ರಾಯಪಟ್ಟರೆ, ಆಗ ಅವನು ಅರ್ಜಿದಾರನ ಹೆಸರನ್ನು ನಮೂದಿಸತಕ್ಕದ್ದು:

ಪರಂತು, ಈ ಅಧಿನಿಯಮದ ಉಪಬಂಧಗಳ ಮೇರೆಗೆ ಯಾವ ವ್ಯಕ್ತಿಯ ಹೆಸರನ್ನು ರಿಜಿಸ್ಟರಿನಿಂದ ತೆಗೆದುಹಾಕಲಾಗಿದೆಯೋ, ಆ ವ್ಯಕ್ತಿಯು ಪರಿಷತ್ತು ಅನುಮತಿ ನೀಡಿದ ಹೊರತು, ತನ್ನ ಹೆಸರನ್ನು ಪುನಃ ರಿಜಿಸ್ಟರಿನಲ್ಲಿ ಸೇರಿಸಿಕೊಳ್ಳುವ ಹಕ್ಕನ್ನು ಹೊಂದಿರತಕ್ಕದ್ದಲ್ಲ.

(3) ನೋಂದಣಿಗಾಗಿ ಸಲ್ಲಿಸಿದ ಯಾರೇ ವ್ಯಕ್ತಿಯ ಅರ್ಜಿಯನ್ನು ರಿಜಿಸ್ಟ್ರಾರರು ತಿರಸ್ಕರಿಸಿದರೆ, ಹಾಗೆ ತಿರಸ್ಕರಿಸಿದ ದಿನಾಂಕದಿಂದ ಮೂರು ತಿಂಗಳ ಒಳಗಾಗಿ ಆತನು ಪರಿಷತ್ತಿಗೆ ಅಪೀಲು ಮಾಡಿಕೊಳ್ಳಬಹುದು.

(4) ಈ ಪ್ರಕರಣದ ಮೇರೆಗೆ ರಿಜಿಸ್ಟರಿನಲ್ಲಿ ಹೆಸರನ್ನು ನಮೂದಿಸಿದ ಮೇಲೆ ನಿಯಮಗಳ ಮೂಲಕ ನಿಯಮಿಸಬಹುದಾದಂಥ ನಮೂನೆಯಲ್ಲಿ ರಿಜಿಸ್ಟ್ರಾರರು ನೋಂದಣಿ ಪ್ರಮಾಣಪತ್ರವನ್ನು ನೀಡತಕ್ಕದ್ದು.

**27. ನವೀಕರಣ ಶುಲ್ಕಗಳು.–** (1) ರಿಜಿಸ್ಟರಿನಲ್ಲಿ ಮೊದಲ ಬಾರಿಗೆ ಹೆಸರನ್ನು ನೋಂದಾಯಿಸಿದ ವರ್ಷದ ಡಿಸೆಂಬರ್ 31ರ ನಂತರ ಬರುವ ವರ್ಷದಲ್ಲಿ ರಿಜಿಸ್ಟರಿನಲ್ಲಿ ಹೆಸರನ್ನು ಉಳಿಸಿಕೊಳ್ಳುವುದಕ್ಕಾಗಿ ನಿಯಮಗಳ ಮೂಲಕ ನಿಯಮಿಸಬಹುದಾದಂಥ ನವೀಕರಣ ಶುಲ್ಕವನ್ನು ವಾರ್ಷಿಕವಾಗಿ ಪರಿಷತ್ತಿಗೆ ಸಂದಾಯ ಮಾಡತಕ್ಕದ್ದೆಂದು ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದೇಶಿಸಬಹುದು ಮತ್ತು ಅಂತಹ ನಿರ್ದೇಶನ ನೀಡಿರುವಲ್ಲಿ ಅಂತಹ ನವೀಕರಣ ಶುಲ್ಕವು ಸಂಬಂಧಿಸಿದ ವರ್ಷದ ಏಪ್ರಿಲ್ 1ಕ್ಕೆ ಮುಂಚೆ ಸಂದಾಯ ಮಾಡುವಂಥದ್ದು ಆಗಿರತಕ್ಕದ್ದು.

(2) ನಿಗದಿತ ದಿನಾಂಕಕ್ಕಿಂತ ಮೊದಲು ನವೀಕರಣ ಶುಲ್ಕವನ್ನು ಸಂದಾಯ ಮಾಡಿರದಿದ್ದರೆ, ರಿಜಿಸ್ಟ್ರಾರರು, ಹಾಗೆ ಶುಲ್ಕ ಸಂದಾಯ ಮಾಡಲು ತಪ್ಪಿದವರ ಹೆಸರನ್ನು ರಿಜಿಸ್ಟರಿನಿಂದ ತೆಗೆದು ಹಾಕತಕ್ಕದ್ದು:

ಪರಂತು, ಹಾಗೆ ತೆಗೆದುಹಾಕಿದ ಹೆಸರನ್ನು ನಿಯಮಗಳ ಮೂಲಕ ನಿಯಮಿಸಬಹುದಾದಂಥ ಷರತ್ತುಗಳ ಮೇರೆಗೆ ಪುನಃ ರಿಜಿಸ್ಟರಿಗೆ ಸೇರಿಸಬಹುದು.

(3) ನವೀಕರಣ ಶುಲ್ಕ ಸಂದಾಯವಾದ ಮೇಲೆ, ರಿಜಿಸ್ಟ್ರಾರನು, ನಿಯಮಗಳ ಮೂಲಕ ನಿಯಮಿಸಬಹುದಾದಂಥ ರೀತಿಯಲ್ಲಿ ನೋಂದಣಿ ಪ್ರಮಾಣಪತ್ರದಲ್ಲಿ ಹಿಂಬರಹ ಮಾಡತಕ್ಕದ್ದು.

**28. ಹೆಚ್ಚಿನ ಅರ್ಹತೆಯ ನಮೂದು.–** ವಾಸ್ತುಶಿಲ್ಪಿಯು, ನಿಯಮಗಳ ಮೂಲಕ ನಿಯಮಿಸಬಹುದಾದಂಥ ಶುಲ್ಕವನ್ನು ಸಂದಾಯ ಮಾಡಿದ ಮೇಲೆ, ಪಡೆಯಬಹುದಾದಂಥ ಇನ್ನು ಹೆಚ್ಚಿನ

ಯಾವುದೇ ಮನ್ನಣೆ ಪಡೆದ ಅರ್ಹತೆಯನ್ನು ರಿಜಿಸ್ಟರಿನಲ್ಲಿ ನಮೂದಿಸಿಕೊಳ್ಳಲು ಅವನು ಹಕ್ಕುಳ್ಳವನಾಗಿರತಕ್ಕದ್ದು.

**29. ರಿಜಿಸ್ಟರಿನಿಂದ ತೆಗೆದುಹಾಕುವುದು.–** (1) ಪರಿಷತ್ತು, ಆದೇಶದ ಮೂಲಕ ಯಾರೇ ವಾಸ್ತುಶಿಲ್ಪಿಯ ಹೆಸರನ್ನು,–

(ಎ) ಆ ಕುರಿತು ಆತನ ವಿನಂತಿಯನ್ನು ಸ್ವೀಕರಿಸಿದ ನಂತರ, ಅಥವಾ

(ಬಿ) ರಿಜಿಸ್ಟರಿನ ಕೊನೆಯ ಪ್ರಕಟಣೆಯ ನಂತರ ಆತನು ಮರಣ ಹೊಂದಿದ್ದರೆ

– ರಿಜಿಸ್ಟರಿನಿಂದ ತೆಗೆದುಹಾಕಬಹುದು.

(2) ಈ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಪರಿಷತ್ತು ಯಾರೇ ವಾಸ್ತುಶಿಲ್ಪಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಕೊಟ್ಟ ನಂತರ ಮತ್ತು ತಾನು ಯುಕ್ತವೆಂದು ಭಾವಿಸಬಹುದಾದಂಥ ಇನ್ನೂ ಹೆಚ್ಚಿನ ಯಾವುದೇ ವಿಚಾರಣೆಯನ್ನು ಮಾಡಿದ ನಂತರ,–

(ಎ) ಅವನ ಹೆಸರು ರಿಜಿಸ್ಟರಿನಲ್ಲಿ ತಪ್ಪಿನಿಂದಾಗಿ ಅಥವಾ ತಪ್ಪು ನಿರೂಪಣೆಯ ಅಥವಾ ಮುಖ್ಯ ಸಂಗತಿಯನ್ನು ಬಚ್ಚಿಟ್ಟ ಕಾರಣದಿಂದ ನಮೂದಾಗಿದೆಯೆಂದು; ಅಥವಾ

(ಬಿ) ಪರಿಷತ್ತಿನ ಅಭಿಪ್ರಾಯದಲ್ಲಿ ಅವನು ನೈತಿಕ ಅಧಃಪತನವನ್ನು ಒಳಗೊಳ್ಳುವ ಯಾವುದೇ ಅಪರಾಧದ ಅಪರಾಧಿಯೆಂದು ನಿರ್ಣೀತನಾಗಿದ್ದಾನೆಂದು; ಅಥವಾ

(ಸಿ) ಅವನು ಅವಿಮುಕ್ತ ದಿವಾಳಿಯಾಗಿದ್ದಾನೆಂದು; ಅಥವಾ

(ಡಿ) ಸಕ್ಷಮ ನ್ಯಾಯಾಲಯದಿಂದ ಅವನು ಅಸ್ವಸ್ಥ ಮನಸ್ಸಿನವನೆಂದು ನ್ಯಾಯ ನಿರ್ಣೀತನಾಗಿದ್ದಾನೆಂದು

– ಅದಕ್ಕೆ ಮನದಟ್ಟಾದರೆ, ಅದು ರಿಜಿಸ್ಟರಿನಿಂದ ಅವನ ಹೆಸರನ್ನು ತೆಗೆದುಹಾಕತಕ್ಕದ್ದೆಂದು ಆದೇಶ ಮಾಡಬಹುದು.

(3) (2)ನೇ ಉಪಪ್ರಕರಣದ ಮೇರೆಗಿನ ಆದೇಶದಲ್ಲಿ ಯಾರೇ ವಾಸ್ತುಶಿಲ್ಪಿಯ ಹೆಸರನ್ನು ರಿಜಿಸ್ಟರಿನಿಂದ ತೆಗೆದುಹಾಕಬೇಕೆಂದು ಆದೇಶಿಸಿರುವಲ್ಲಿ, ಈ ಅಧಿನಿಯಮದ ಮೇರೆಗೆ ನಿರ್ದಿಷ್ಟಪಡಿಸಬಹುದಾದಂತಹ ಅವಧಿಗೆ ಆತನು ನೋಂದಣಿಗೆ ಅನರ್ಹನಾಗತಕ್ಕದ್ದೆಂದು ನಿರ್ದೇಶಿಸಬಹುದು.

(4) (2)ನೇ ಉಪಪ್ರಕರಣದ ಮೇರೆಗಿನ ಆದೇಶವು ಅದರ ದಿನಾಂಕದಿಂದ ಮೂರು ತಿಂಗಳು ಮುಕ್ತಾಯವಾಗುವವರೆಗೆ ಪರಿಣಾಮಕಾರಿಯಾಗಿರತಕ್ಕದ್ದಲ್ಲ.

**30. ದುರ್ನಡತೆಗೆ ಸಂಬಂಧಿಸಿದ ವಿಚಾರಣೆಗಳಲ್ಲಿ ಪ್ರಕ್ರಿಯೆ.–** (1) ಪರಿಷತ್ತು, ದೂರನ್ನು ಸ್ವೀಕರಿಸಿದ ಮೇಲೆ, ಯಾರೇ ವಾಸ್ತುಶಿಲ್ಪಿಯು, ವೃತ್ತೀಯ ದುರ್ನಡತೆಯ ಕಾರಣದಿಂದಾಗಿ ತಪ್ಪಿತಸ್ಥನೆಂದು ರುಜುವಾತಾದರೆ, ಆಗ ವಾಸ್ತುಶಿಲ್ಪಿಯಾಗಿ ವೃತ್ತಿಯನ್ನು ನಡೆಸಲು ಅವನು ಅನರ್ಹನಾಗುತ್ತಾನೆ ಎಂದು ಪರಿಷತ್ತು ಅಭಿಪ್ರಾಯಪಟ್ಟರೆ ನಿಯಮಗಳ ಮೂಲಕ ನಿಯಮಿಸಬಹುದಾದಂಥ ರೀತಿಯಲ್ಲಿ ಪರಿಷತ್ತು ವಿಚಾರಣೆಯನ್ನು ನಡೆಸತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ವಿಚಾರಣೆಯನ್ನು ನಡೆಸಿದ ನಂತರ ಮತ್ತು ವಾಸ್ತುಶಿಲ್ಪಿಯ ಅಹವಾಲನ್ನು ಕೇಳಿದ ನಂತರ, ಪರಿಷತ್ತು ಆದೇಶದ ಮೂಲಕ, ಸದರಿ ವಾಸ್ತುಶಿಲ್ಪಿಗೆ ವಾಗ್ದಂಡನೆ ವಿಧಿಸಬಹುದು ಅಥವಾ ವಾಸ್ತುಶಿಲ್ಪಿಯಾಗಿ ವೃತ್ತಿ ನಡೆಸುವುದರಿಂದ ಅವನನ್ನು ಅಮಾನತ್ತಿನಲ್ಲಿಡಬಹುದು ಅಥವಾ ರಿಜಿಸ್ಟರಿನಿಂದ ಅವನ ಹೆಸರನ್ನು ತೆಗೆದುಹಾಕಬಹುದು ಅಥವಾ ಅದು ಯುಕ್ತವೆಂದು ಭಾವಿಸುವಂತಹ ಯಾವುದೇ ಇತರ ಆದೇಶವನ್ನು ಹೊರಡಿಸಬಹುದು.

**31. ಪ್ರಮಾಣ ಪತ್ರಗಳನ್ನು ಹಿಂದಿರುಗಿಸುವುದು.–** 27ನೇ ಪ್ರಕರಣದ (2)ನೇ ಉಪಪ್ರಕರಣದ, 29ನೇ ಪ್ರಕರಣದ (1)ನೇ ಉಪ ಪ್ರಕರಣದ ಅಥವಾ (2)ನೇ ಉಪ ಪ್ರಕರಣದ ಅಥವಾ 30ನೇ ಪ್ರಕರಣದ (2)ನೇ ಉಪ ಪ್ರಕರಣದ ಮೇರೆಗೆ ಒಬ್ಬ ವ್ಯಕ್ತಿಯ ಹೆಸರನ್ನು ರಿಜಿಸ್ಟರಿನಿಂದ ತೆಗೆದುಹಾಕಿದಾಗ ಅಥವಾ ಅಂತಹ ವ್ಯಕ್ತಿಯು ಮೃತನಾದಾಗ, ಆತನ ಕಾನೂನು ಸಮ್ಮತ ಪ್ರತಿನಿಧಿಯು ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ 2ನೇ ಪ್ರಕರಣದ (11)ನೇ ಖಂಡದಲ್ಲಿ ವಿವರಿಸಿದಂತೆ, ತಕ್ಷಣವೇ ಅವನ ನೋಂದಣಿ ಪ್ರಮಾಣಪತ್ರವನ್ನು ರಿಜಿಸ್ಟ್ರಾರನಿಗೆ ಹಿಂದಿರುಗಿಸತಕ್ಕದ್ದು ಮತ್ತು ಹಾಗೆ ತೆಗೆದುಹಾಕಿದ ಹೆಸರನ್ನು ರಾಜಪತ್ರದಲ್ಲಿ ಪ್ರಕಟಿಸತಕ್ಕದ್ದು.

**32. ರಿಜಿಸ್ಟರಿನಲ್ಲಿ ಪುನಃ ಸೇರಿಸುವುದು.–** ಪರಿಷತ್ತು ಯಾವುದೇ ಕಾಲದಲ್ಲಿ ಸಾಕಷ್ಟು ಕಾರಣಗಳಿವೆಯೆಂದು ತನಗೆ ಕಂಡುಬಂದಾಗ ಮತ್ತು ಕೇಂದ್ರ ಸರ್ಕಾರದ ಅನುಮೋದನೆಗೆ ಒಳಪಟ್ಟು, ನಿಯಮಗಳ ಮೂಲಕ ನಿಯಮಿಸಬಹುದಾದಂಥ ಶುಲ್ಕವನ್ನು ಸಂದಾಯ ಮಾಡಿದ ಮೇಲೆ ರಿಜಿಸ್ಟರಿನಿಂದ ತೆಗೆದುಹಾಕಿದ ವ್ಯಕ್ತಿಯ ಹೆಸರನ್ನು ಅದರಲ್ಲಿ ಪುನಃ ಸೇರಿಸತಕ್ಕದ್ದೆಂದು ಆದೇಶಿಸಬಹುದು.

**33. ಪ್ರಮಾಣಪತ್ರಗಳ ದ್ವಿಪ್ರತಿಯ ನೀಡಿಕೆ.–** ನೋಂದಣಿ ಪ್ರಮಾಣ ಪತ್ರವು ಕಳೆದುಹೋಗಿದೆ ಅಥವಾ ನಾಶವಾಗಿದೆ ಎಂಬುದನ್ನು ರಿಜಿಸ್ಟ್ರಾರನಿಗೆ ಮನದಟ್ಟಾಗುವಂತೆ ತೋರಿಸಿದಲ್ಲಿ, ನಿಯಮಗಳ ಮೂಲಕ ನಿಯಮಿಸಬಹುದಾದಂತಹ ಶುಲ್ಕವನ್ನು ಸಂದಾಯ ಮಾಡಿದ ಮೇಲೆ ರಿಜಿಸ್ಟ್ರಾರನು ನಿಯಮಗಳ ಮೂಲಕ ನಿಯಮಿಸಿದ ನಮೂನೆಯಲ್ಲಿ ಪ್ರಮಾಣಪತ್ರದ ದ್ವಿಪ್ರತಿಯನ್ನು ನೀಡಬಹುದು.

**34. ರಿಜಿಸ್ಟರಿನ ಮುದ್ರಣ.–** ಪ್ರತಿವರ್ಷ ಏಪ್ರಿಲ್ 1ರ ನಂತರ ಆದಷ್ಟು ಬೇಗನೆ, ರಿಜಿಸ್ಟ್ರಾರನು ಸದರಿ ದಿನಾಂಕದಂದು ಇರುವಂತೆ ರಿಜಿಸ್ಟರಿನ ಪ್ರತಿಗಳನ್ನು ಮುದ್ರಿಸುವಂತೆ ಮಾಡತಕ್ಕದ್ದು ಮತ್ತು ನಿಯಮಗಳ ಮೂಲಕ ಗೊತ್ತುಪಡಿಸಬಹುದಾದಂತಹ ಶುಲ್ಕವನ್ನು ಸಂದಾಯ ಮಾಡಿದ ಮೇಲೆ ಅರ್ಜಿ ಸಲ್ಲಿಸುವಂತಹ

ವ್ಯಕ್ತಿಗಳಿಗೆ ಅಂತಹ ಪ್ರತಿಗಳು ದೊರೆಯುವಂತೆ ಮಾಡತಕ್ಕದ್ದು ಮತ್ತು ಸದರಿ ದಿನಾಂಕದಂದು ಅದರಲ್ಲಿ ಯಾವ ವ್ಯಕ್ತಿಗಳ ಹೆಸರುಗಳು ನಮೂದಾಗಿವೆಯೋ ಅವರು ವಾಸ್ತುಶಿಲ್ಪಿಗಳೆಂಬುದಕ್ಕೆ ಅದು ಸಾಕ್ಷಿಯಾಗಿರತಕ್ಕದ್ದು.

**35. ನೋಂದಣಿಯ ಪರಿಣಾಮ.–** (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ವಾಸ್ತುಶಿಲ್ಪಿಗೆ ಮಾಡಿರುವ ಯಾವುದೇ ಉಲ್ಲೇಖವನ್ನು ಈ ಅಧಿನಿಯಮದ ಮೇರೆಗೆ ನೋಂದಾಯಿತ ವಾಸ್ತುಶಿಲ್ಪಿಗೆ ಮಾಡಿದ ಉಲ್ಲೇಖವೆಂದು ಭಾವಿಸತಕ್ಕದ್ದು.

(2) 24ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ನೇಮಕಗೊಂಡ ದಿನಾಂಕದಿಂದ ಎರಡು ವರ್ಷಗಳು ಮುಕ್ತಾಯವಾದ ತರುವಾಯ ರಿಜಿಸ್ಟರಿನಲ್ಲಿ ನೋಂದಾಯಿತವಾದ ವ್ಯಕ್ತಿಯು ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅಥವಾ ಸಾರ್ವಜನಿಕ ಅಥವಾ ಸ್ಥಳೀಯ ನಿಧಿಗಳಿಂದ ಬೆಂಬಲವನ್ನು ಅಥವಾ ನೆರವನ್ನು ಪಡೆದ ಯಾವುದೇ ಇತರ ಸ್ಥಳೀಯ ನಿಕಾಯದಲ್ಲಿ ಅಥವಾ ಸಂಸ್ಥೆಯಲ್ಲಿ ಅಥವಾ ಕೇಂದ್ರ ಅಥವಾ ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆದ ಯಾವುದೇ ಸಂಸ್ಥೆಯಲ್ಲಿ ವಾಸ್ತುಶಿಲ್ಪಿಯಾಗಿ ನೇಮಕಗೊಳ್ಳಲು ಆದ್ಯತೆಯನ್ನು ಪಡೆಯತಕ್ಕದ್ದು.

## ಅಧ್ಯಾಯ –IV
## ಸಂಕೀರ್ಣ

**36. ನೋಂದಣಿ ಆಗಿದೆಯೆಂದು ಸುಳ್ಳಾಗಿ ಕ್ಲೇಮು ಮಾಡುವುದಕ್ಕಾಗಿ ದಂಡನೆ.–** ರಿಜಿಸ್ಟರಿನಲ್ಲಿ ತತ್ಕಾಲಕ್ಕೆ ಹೆಸರು ನಮೂದಾಗಿಲ್ಲದ ಯಾರೇ ವ್ಯಕ್ತಿಯು ಹಾಗೆ ನಮೂದು ಆಗಿದೆಯೆಂದು ಸುಳ್ಳು ನಿರೂಪಣೆ ಮಾಡಿದರೆ ಅಥವಾ ತನ್ನ ಹೆಸರಿಗೆ ಅಥವಾ ಪದನಾಮಕ್ಕೆ ಸಂಬಂಧಿಸಿದಂತೆ ತನ್ನ ಹೆಸರು ಹಾಗೆ ನಮೂದಾಗಿದೆಯೆಂದು ಸೂಚಿಸುವ ಉದ್ದೇಶದಿಂದ ಯಾವುವೇ ಪದಗಳನ್ನು ಅಥವಾ ಅಕ್ಷರಗಳನ್ನು ಉಪಯೋಗಿಸಿದರೆ, ಅವನು ಒಂದು ಸಾವಿರ ರೂಪಾಯಿಗಳವರಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**37. ಪದನಾಮ ಬಳಸುವುದರ ವಿರುದ್ಧ ನಿಷೇಧ.–** (1) 24ನೇ ಪ್ರಕರಣದ (2)ನೇ ಉಪ ಪ್ರಕರಣದ ಮೇರೆಗೆ ಗೊತ್ತುಪಡಿಸಿದ ದಿನಾಂಕದಿಂದ ಒಂದು ವರ್ಷ ಮುಕ್ತಾಯವಾದ ನಂತರ ನೋಂದಣಿಯಾದ ವಾಸ್ತುಶಿಲ್ಪಿಯಲ್ಲದ ಬೇರೆ ಯಾರೇ ವ್ಯಕ್ತಿಯು ಅಥವಾ ವಾಸ್ತುಶಿಲ್ಪಿಗಳ ಸಂಸ್ಥೆಯು ವಾಸ್ತುಶಿಲ್ಪಿಯ ಪದನಾಮವನ್ನು ಮತ್ತು ಶೈಲಿಯನ್ನು ಬಳಸತಕ್ಕದ್ದಲ್ಲ:

ಪರಂತು, ಈ ಪ್ರಕರಣದ ಉಪಬಂಧಗಳು,–

(ಎ) "ಭೂ ಸದೃಶ್ಯ ವಾಸ್ತುಶಿಲ್ಪಿ" ಅಥವಾ "ನೌಕಾ ವಾಸ್ತುಶಿಲ್ಪಿ" ಎಂದು ಹೆಸರಿಸಲಾದ ವ್ಯಕ್ತಿಯು ವಾಸ್ತುಶಿಲ್ಪ ವೃತ್ತಿಯನ್ನು ನಡೆಸುವುದಕ್ಕೆ;

(ಬಿ) ಭಾರತದ ಹೊರಗಿರುವ ಯಾವುದೇ ದೇಶದಲ್ಲಿ ವಾಸ್ತುಶಿಲ್ಪಿಯಾಗಿ ವೃತ್ತಿಯನ್ನು ನಡೆಸುತ್ತಿರುವ ವ್ಯಕ್ತಿಯು, ಕೇಂದ್ರ ಸರ್ಕಾರದ ಪೂರ್ವ ಅನುಮತಿಯೊಂದಿಗೆ, ನಿರ್ದಿಷ್ಟ ಯೋಜನೆಗಾಗಿ ಭಾರತದಲ್ಲಿ ಸಲಹೆಗಾರನಾಗಿ ಅಥವಾ ವಿನ್ಯಾಸಗಾರನಾಗಿ ಕಾರ್ಯ ಕೈಗೊಂಡರೆ

– ಅವನಿಗೆ ಅನ್ವಯವಾಗತಕ್ಕದ್ದಲ್ಲ.

**ವಿವರಣೆ.–** (ಎ) ಖಂಡದ ಉದ್ದೇಶಗಳಿಗಾಗಿ,–

(i) "ಭೂ ಸದೃಶ್ಯ ವಾಸ್ತುಶಿಲ್ಪಿ" ಎಂದರೆ ಗಿಡಗಳು, ಮರಗಳು ಮತ್ತು ಭೂ ಸದೃಶ್ಯಕ್ಕೆ ಸಂಬಂಧಿಸಿದಂತೆ ಬಯಲು ಸ್ಥಳಗಳ ವಿನ್ಯಾಸವನ್ನು ಮಾಡುವ ವ್ಯಕ್ತಿ ಎಂದು ಅರ್ಥ;

(ii) "ನೌಕಾ ವಾಸ್ತುಶಿಲ್ಪಿ" ಎಂದರೆ ಹಡಗುಗಳ ವಿನ್ಯಾಸ ಮಾಡುವ ಮತ್ತು ನಿರ್ಮಿಸುವ ವಾಸ್ತುಶಿಲ್ಪಿ.

(2) (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿದ ಯಾರೇ ವ್ಯಕ್ತಿಯು, ಅವನು ಮೊದಲನೇ ಅಪರಾಧ ನಿರ್ಣೀತನಾದಾಗ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಆ ತರುವಾಯವೂ ಅಪರಾಧ ನಿರ್ಣೀತನಾದಾರೆ ಆರು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳಿಗೆ ಮೀರದ ಜುಲ್ಮಾನೆಯಿಂದ ಅಥವಾ ಅವೆಡರಿಂದಲೂ ದಂಡಿತನಾಗತಕ್ಕದ್ದು.

**38. ನೋಂದಣಿ ಪ್ರಮಾಣಪತ್ರವನ್ನು ಹಿಂದಿರುಗಿಸಲು ವಿಫಲತೆ.–** ರಿಜಿಸ್ಟರಿನಿಂದ ಯಾರ ಹೆಸರನ್ನು ತೆಗೆಯಲಾಗಿದೆಯೋ ಆ ಯಾರೇ ವ್ಯಕ್ತಿಯು ಆತನ ನೋಂದಣಿ ಪ್ರಮಾಣಪತ್ರವನ್ನು ಸಾಕಷ್ಟು ಕಾರಣಗಳಿಲ್ಲದೆ ಕೂಡಲೇ ಹಿಂದಿರುಗಿಸಲು ವಿಫಲನಾದರೆ ಅವನು ಒಂದು ನೂರು ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ವಿಫಲತೆ ಮುಂದುವರಿಯುವ ಸಂದರ್ಭದಲ್ಲಿ ಹಾಗೆ ಆತನ ವಿಫಲತೆ ಮುಂದುವರೆದ ಮೊದಲನೆಯ ದಿನದ ತರುವಾಯದ ಪ್ರತಿ ದಿನಕ್ಕೆ ಹತ್ತು ರೂಪಾಯಿಯವರೆಗೆ ವಿಸ್ತರಿಸಬಹುದಾದ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**39. ಅಪರಾಧಗಳ ಸಂಜ್ಞೇಯತೆ.–** (1) ಪರಿಷತ್ತಿನ ಆದೇಶದ ಮೇರೆಗೆ ಅಥವಾ ಪರಿಷತ್ತು ಈ ಕುರಿತು ಅಧಿಕೃತಗೊಳಿಸಿದ ವ್ಯಕ್ತಿಯು ನೀಡಿದ ದೂರಿನ ಮೇಲೆ ಹೊರತು ಯಾವುದೇ ನ್ಯಾಯಾಲಯವು, ಈ ಅಧಿನಿಯಮದ ಮೇರೆಗೆ, ದಂಡನೀಯವಾದ ಯಾವುದೇ ಅಪರಾಧದ ಸಂಜ್ಞೇಯತೆಯನ್ನು ತೆಗೆದುಕೊಳ್ಳತಕ್ಕದ್ದಲ್ಲ.

(2) ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧದ ಅಧಿವಿಚಾರಣೆಯನ್ನು ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟನನ್ನು ಅಥವಾ ಒಬ್ಬ ಪ್ರಥಮ ದರ್ಜೆಯ ಮ್ಯಾಜಿಸ್ಟ್ರೇಟನನ್ನು ಹೊರತುಪಡಿಸಿ ಬೇರೆ ಯಾವ ದಂಡಾಧಿಕಾರಿಯೂ ನಡೆಸತಕ್ಕದ್ದಲ್ಲ.

**40. ಪರಿಷತ್ತು ಒದಗಿಸತಕ್ಕ ಮಾಹಿತಿ ಮತ್ತು ಅದರ ಪ್ರಕಟಣೆ.–** (1) ಪರಿಷತ್ತು, ಕೇಂದ್ರ ಸರ್ಕಾರವು ಅಗತ್ಯಪಡಿಸಬಹುದಾದಂತಹ ವರದಿಗಳನ್ನು, ವ್ಯವಹರಣೆಗಳ ಪ್ರತಿಗಳನ್ನು ಮತ್ತು ಇತರ ಮಾಹಿತಿಯನ್ನು ಕೇಂದ್ರ ಸರ್ಕಾರಕ್ಕೆ ಒದಗಿಸತಕ್ಕದ್ದು.

(2) ಕೇಂದ್ರ ಸರ್ಕಾರವು, ಈ ಪ್ರಕರಣದ ಮೇರೆಗೆ ತನಗೆ ಒದಗಿಸಲಾದ ಯಾವುದೇ ವರದಿಯನ್ನು, ಪ್ರತಿಯನ್ನು ಅಥವಾ ಇತರ ಮಾಹಿತಿಯನ್ನು ತಾನು ಯುಕ್ತವೆಂದು ಯೋಚಿಸುವಂಥ ರೀತಿಯಲ್ಲಿ ಪ್ರಕಟಿಸಬಹುದು.

**41. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.–** ಕೇಂದ್ರ ಸರ್ಕಾರದ, ಪರಿಷತ್ತಿನ ಅಥವಾ ಪರಿಷತ್ತಿನ ಯಾರೇ ಸದಸ್ಯನ, ಕಾರ್ಯನಿರ್ವಾಹಕ ಸಮಿತಿಯ ಅಥವಾ ಇತರ ಯಾವುದೇ ಸಮಿತಿಯ ಅಥವಾ ಪರಿಷತ್ತಿನ ಅಧಿಕಾರಿಗಳ ಮತ್ತು ಇತರ ನೌಕರರ ವಿರುದ್ಧ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಅಥವಾ ವಿನಿಯಮನಗಳ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯದ ಬಗ್ಗೆ ದಾವೆಯನ್ನು, ಪ್ರಾಸಿಕ್ಯೂಷನ್‌ನನ್ನು ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

**42. ಪರಿಷತ್ತಿನ ಸದಸ್ಯರು ಮತ್ತು ಅಧಿಕಾರಿಗಳು ಹಾಗೂ ನೌಕರರು ಲೋಕ ನೌಕರರಾಗಿರುವುದು.–** ಪರಿಷತ್ತಿನ ಸದಸ್ಯರು ಮತ್ತು ಪರಿಷತ್ತಿನ ಅಧಿಕಾರಿಗಳು ಮತ್ತು ಇತರ ನೌಕರರು ಭಾರತ ದಂಡ ಸಂಹಿತೆಯ 21ನೆಯ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕ ನೌಕರರಾಗಿರುವುದಾಗಿ ಭಾವಿಸತಕ್ಕದ್ದು.

**43. ತೊಂದರೆಗಳನ್ನು ನಿವಾರಿಸಲು ಅಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದರೆ, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ತೊಂದರೆಯನ್ನು ನಿವಾರಿಸಲು ತನಗೆ ಅವಶ್ಯ ಅಥವಾ ಯುಕ್ತವೆಂದು ತೋರುವ ಮತ್ತು ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರದಂಥ ಉಪಬಂಧಗಳನ್ನು ಕಲ್ಪಿಸಬಹುದು:

ಪರಂತು, ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಎರಡು ವರ್ಷಗಳು ಮುಕ್ತಯವಾದ ತರುವಾಯ ಯಾವುದೇ ಅಂಥ ಆದೇಶವನ್ನು ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವನ್ನು, ಸಾಧ್ಯವಾದಷ್ಟು ಬೇಗನೆ, ಅದನ್ನು ಮಾಡಿದ ತರುವಾಯ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇರಿಸತಕ್ಕದ್ದು ಮತ್ತು 44ನೇ

ಪ್ರಕರಣದ (3)ನೇ ಉಪ-ಪ್ರಕರಣದ ಉಪಬಂಧಗಳು ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮದ ಸಂಬಂಧದಲ್ಲಿ ಅದು ಅನ್ವಯವಾಗುವ ಹಾಗೆ ಅಂತಹ ಆದೇಶದ ಸಂಬಂಧದಲ್ಲಿಯೂ ಅನ್ವಯಿಸತಕ್ಕದ್ದು.

**44. ನಿಯಮಗಳನ್ನು ರಚಿಸಲು ಕೇಂದ್ರ ಸರ್ಕಾರದ ಅಧಿಕಾರ.-** (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಗಳನ್ನು ಜಾರಿಗೆ ತರುವುದಕ್ಕೆ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಮೇಲೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಅಂತಹ ನಿಯಮಗಳಲ್ಲಿ ಈ ಕೆಳಕಂಡ ಎಲ್ಲಾ ಅಥವಾ ಯಾವುವೇ ವಿಷಯಗಳಿಗಾಗಿ ಉಪಬಂಧ ಕಲ್ಪಿಸಬಹುದು, ಎಂದರೆ,-

(ಎ) 2ನೇ ಅಧ್ಯಾಯದ ಮೇರೆಗೆ ಚುನಾವಣೆಗಳನ್ನು ನಡೆಸಬೇಕಾದ ರೀತಿ, 5ನೇ ಪ್ರಕರಣದ (2)ನೇ ಉಪ ಪ್ರಕರಣದ ಮೇರೆಗೆ ನೇಮಕಗೊಂಡ ನ್ಯಾಯಾಧಿಕರಣದ ಸದಸ್ಯರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ಮತ್ತು ನ್ಯಾಯಾಧಿಕರಣವು ಅನುಸರಿಸಬೇಕಾದ ಪ್ರಕ್ರಿಯೆ;

(ಬಿ) 14ನೇ ಪ್ರಕರಣದ (2)ನೇ ಉಪಪ್ರಕರಣದ ಪರಂತುಕದ ಮೇರೆಗೆ ರಚಿಸಲಾದ ತಜ್ಞ ಸಮಿತಿಯು ತನ್ನ ಕಾರ್ಯಕಲಾಪಗಳನ್ನು ನಡೆಸಲು ಅನುಸರಿಸತಕ್ಕ ಪ್ರಕ್ರಿಯೆ ಮತ್ತು ತಜ್ಞ ಸಮಿತಿಯ ಅಧಿಕಾರಗಳು ಮತ್ತು ಕರ್ತವ್ಯಗಳು ಮತ್ತು ಅದರ ಸದಸ್ಯರಿಗೆ ಸಂದಾಯ ಮಾಡತಕ್ಕ ಪ್ರಯಾಣ ಭತ್ಯೆ ಮತ್ತು ದಿನಭತ್ಯೆಗಳು;

(ಸಿ) 23ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ವಾಸ್ತುಶಿಲ್ಪಿಗಳ ರಿಜಿಸ್ಟರಿನಲ್ಲಿ ಸೇರಿಸತಕ್ಕ ವಿವರಗಳು;

(ಡಿ) 24ನೇ ಪ್ರಕರಣದ (7)ನೇ ಉಪಪ್ರಕರಣದ, 26ನೇ ಪ್ರಕರಣದ (4)ನೇ ಉಪಪ್ರಕರಣದ ಮತ್ತು 33ನೇ ಪ್ರಕರಣದ ಮೇರೆಗೆ ನೋಂದಣಿ ಪ್ರಮಾಣ ಪತ್ರವನ್ನು ಯಾವ ನಮೂನೆಯಲ್ಲಿ ಕೊಡಬೇಕೋ ಆ ನಮೂನೆ;

(ಇ) 24, 25, 26, 27, 28, 32 ಮತ್ತು 33ನೇ ಪ್ರಕರಣಗಳ ಮೇರೆಗೆ ಸಂದಾಯ ಮಾಡತಕ್ಕ ಶುಲ್ಕ;

(ಎಫ್) 27ನೇ ಪ್ರಕರಣದ (2)ನೇ ಉಪ ಪ್ರಕರಣದ ಪರಂತುಕದ ಮೇರೆಗೆ ಯಾವ ಷರತ್ತುಗಳ ಮೇಲೆ ಹೆಸರನ್ನು ರಿಜಿಸ್ಟರಿನಲ್ಲಿ ಸೇರಿಸಬೇಕೋ ಆ ಷರತ್ತುಗಳು;

(ಜಿ) 27ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಹಿಂಬರಹದ ಮಾಡುವ ರೀತಿ;

(ಹೆಚ್) 30ನೇ ಪ್ರಕರಣದ ಮೇರೆಗೆ ಪರಿಷತ್ತು ವಿಚಾರಣೆಯನ್ನು ಯಾವ ರೀತಿಯಲ್ಲಿ ನಡೆಸಬೇಕೋ ಆ ರೀತಿ;

(ಐ) 34ನೇ ಪ್ರಕರಣದ ಮೇರೆಗೆ ರಿಜಿಸ್ಟರಿನ ಮುದ್ರಿತ ಪ್ರತಿಗಳನ್ನು ಒದಗಿಸುವುದಕ್ಕಾಗಿ ಶುಲ್ಕ;

(ಜೆ) ಈ ಅಧಿನಿಯಮದ ಮೇರೆಗೆ ನಿಯಮಗಳ ಮೂಲಕ ಉಪಬಂಧಿಸಬೇಕಾದ ಅಥವಾ ಉಪಬಂಧಿಸಬಹುದಾದ ಯಾವುದೇ ಇತರ ವಿಷಯ.

(3) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇರಿಸತಕ್ಕದ್ದು ಮತ್ತು ಮೇಲೆ ಹೇಳಲಾದ ಅಧಿವೇಶನದ ಅಥವಾ ಅನುಕ್ರಮವಾಗಿ ಬರುವ ಅದರ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು, ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಾಮಕಾರಿಯಾಗಿರತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**45. ವಿನಿಯಮನಗಳನ್ನು ರಚಿಸಲು ಪರಿಷತ್ತಿನ ಅಧಿಕಾರ.–** (1) ಪರಿಷತ್ತು, ಕೇಂದ್ರ ಸರ್ಕಾರದ ಅನುಮೋದನೆಯೊಂದಿಗೆ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳನ್ನು ಜಾರಿಗೆ ತರುವುದಕ್ಕಾಗಿ ಈ ಅಧಿನಿಯಮದ ಅಥವಾ ಆ ಮೇರೆಗೆ ರಚಿಸಿದ ನಿಯಮಗಳ ಉಪಬಂಧಗಳಿಗೆ ಅಸಂಗತವಾಗದಂತೆ ವಿನಿಯಮನಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಮೇಲೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಅಂಥ ವಿನಿಯಮನಗಳಲ್ಲಿ,–

(ಎ) ಪರಿಷತ್ತಿನ ಸ್ವತ್ತಿನ ನಿರ್ವಹಣೆಗೆ;

(ಬಿ) ಪರಿಷತ್ತಿನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಅಧಿಕಾರಗಳಿಗೆ ಮತ್ತು ಕರ್ತವ್ಯಗಳಿಗೆ;

(ಸಿ) ಪರಿಷತ್ತಿನ ಮತ್ತು ಕಾರ್ಯನಿರ್ವಾಹಕ ಸಮಿತಿಯ ಅಥವಾ 10ನೇ ಪ್ರಕರಣದ ಮೇರೆಗೆ ರಚಿತವಾದ ಇತರ ಯಾವುದೇ ಸಮಿತಿಯ ಸಭೆಗಳನ್ನು ಕರೆಯುವುದು ಮತ್ತು ನಡೆಸುವುದು, ಅಂತಹ ಸಭೆಗಳನ್ನು ಯಾವ ಸಮಯದಲ್ಲಿ ಮತ್ತು ಯಾವ ಸ್ಥಳದಲ್ಲಿ ನಡೆಸಬೇಕೋ ಆ ಸಮಯ ಮತ್ತು ಸ್ಥಳ, ಅದರಲ್ಲಿ ನಡೆಸತಕ್ಕ ಕಾರ್ಯಕಲಾಪಗಳು ಮತ್ತು ಕೋರಂ ಆಗಲು ಅಗತ್ಯವಿರುವ ವ್ಯಕ್ತಿಗಳ ಸಂಖ್ಯೆ ಬಗ್ಗೆ;

(ಡಿ) ಕಾರ್ಯನಿರ್ವಾಹಕ ಸಮಿತಿಯ ಅಥವಾ 10ನೇ ಪ್ರಕರಣದ ಮೇರೆಗೆ ರಚಿತವಾದ ಇತರ ಯಾವುದೇ ಸಮಿತಿಯ ಪ್ರಕಾರ್ಯಗಳಿಗೆ;

(ಇ) ಕೈಗೊಳ್ಳತಕ್ಕ ಅಧ್ಯಯನದ ಮತ್ತು ಪ್ರಾಯೋಗಿಕ ತರಬೇತಿಯ ಪಠ್ಯ ವಿಷಯಗಳು, ಮತ್ತು ಅವಧಿಗಳು ಯಾವುವಾದರೂ ಇದ್ದರೆ, ಮನ್ನಣೆ ಪಡೆದ ಅರ್ಹತೆಗಳನ್ನು ನೀಡುವುದಕ್ಕಾಗಿ ಯಾವುದೇ ಕಾಲೇಜಿನಲ್ಲಿ ಅಥವಾ ಸಂಸ್ಥೆಯಲ್ಲಿ ಪರೀಕ್ಷಾ ವಿಷಯಗಳು ಮತ್ತು ಅದರಲ್ಲಿ ಪಡೆಯಬೇಕಾದ ಪ್ರಾವಿಣ್ಯತೆಯ ಮಾನದಂಡಗಳಿಗೆ;

(ಎಫ್) ಪರಿವೀಕ್ಷಕರ ನೇಮಕ, ಅಧಿಕಾರಗಳು ಮತ್ತು ಕರ್ತವ್ಯಗಳಿಗೆ;

(ಜಿ) ವಾಸ್ತುಶಿಲ್ಪ ಶಿಕ್ಷಣಕ್ಕೆ ಬೇಕಾಗುವ ಸಿಬ್ಬಂದಿ, ಸಲಕರಣೆ, ಸ್ಥಳಾವಕಾಶ, ತರಬೇತಿ ಮತ್ತು ಇತರ ಸೌಕರ್ಯಗಳ ಮಾನದಂಡಗಳಿಗೆ;

(ಹೆಚ್) ವೃತ್ತಿ ಪರೀಕ್ಷೆಗಳನ್ನು ನಡೆಸುವುದು, ಪರೀಕ್ಷಕರ ಅರ್ಹತೆಗಳು ಮತ್ತು ಅಂತಹ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಷರತ್ತುಗಳಿಗೆ;

(ಐ) ವಾಸ್ತುಶಿಲ್ಪಿಗಳು ಪಾಲಿಸಬೇಕಾದ ವೃತ್ತೀಯ ನಡತೆಯ ಮಟ್ಟಗಳು ಮತ್ತು ಶಿಷ್ಟಾಚಾರಗಳು ಮತ್ತು ನೀತಿಸಂಹಿತೆಗಳಿಗೆ;

(ಜೆ) ಈ ಅಧಿನಿಯಮದ ಮೇರೆಗಿನ ವಿನಿಯಮನಗಳ ಮೂಲಕ ಉಪಬಂಧಿಸಬೇಕಾದ ಅಥವಾ ಉಪಬಂಧಿಸಬಹುದಾದ ಯಾವುದೇ ಇತರ ವಿಷಯಗಳಿಗೆ ಮತ್ತು ನಿಯಮಗಳನ್ನು ರಚಿಸಿರದಂಥ ವಿಷಯಗಳ ಸಂಬಂಧದಲ್ಲಿಯೂ ನಿಯಮಗಳನ್ನು ರಚಿಸಲು

– ಉಪಬಂಧ ಕಲ್ಪಿಸಬಹುದು.

(3) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ವಿನಿಯಮನವನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ನಿರಂತರವಾಗಿ ಬರುವ ಎರಡು ಅಥವಾ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇರಿಸತಕ್ಕದ್ದು

ಮತ್ತು ಮೇಲೆ ಹೇಳಲಾದ ಅಧಿವೇಶನದ ನಿಕಟೋತ್ತರದ ಅಧಿವೇಶನದ ಅಥವಾ ಅನುಕ್ರಮ ಅಧಿವೇಶನಗಳ ಮುಕ್ತಾಯಕ್ಕೆ ಮುಂಚೆ ಆ ವಿನಿಯಮನದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ವಿನಿಯಮನವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ, ಆ ವಿನಿಯಮನವು, ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ವಿನಿಯಮನದ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**ಅನುಸೂಚಿ**
**(14ನೇ ಪ್ರಕರಣವನ್ನು ನೋಡಿ)**
**ಅರ್ಹತೆಗಳು**

1. ಕೇಂದ್ರ ಅಥವಾ ರಾಜ್ಯ ವಿಧಾನ ಮಂಡಲದ ಅಧಿನಿಯಮದ ಮೂಲಕ ಸ್ಥಾಪಿತವಾದ ಭಾರತೀಯ ವಿಶ್ವವಿದ್ಯಾನಿಲಯಗಳು ನೀಡುವ ವಾಸ್ತುಶಿಲ್ಪ ಸ್ನಾತಕ ಪದವಿ.

2. ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು ನೀಡಿದ ವಾಸ್ತುಶಿಲ್ಪದ ರಾಷ್ಟ್ರೀಯ ಡಿಪ್ಲೊಮಾ (ಈ ಮೊದಲು ಅಖಿಲ ಭಾರತ ಡಿಪ್ಲೊಮಾ).

3. ಭಾರತ ತಂತ್ರ ವಿಜ್ಞಾನ ಸಂಸ್ಥೆ, ಖರಗ್‌ಪುರ ನೀಡಿದ ವಾಸ್ತುಶಿಲ್ಪದ ಸ್ನಾತಕ ಪದವಿ(ಬಿ.ಅರ್ಕ್).

4. ಸರ್ ಜೆ.ಜೆ. ಕಲಾ ಶಾಲೆ, ಮುಂಬಯಿ, ಇದು 1941ರ ನಂತರ ನೀಡಿದ ವಾಸ್ತುಶಿಲ್ಪದಲ್ಲಿ ನೀಡಲಾಗುವ ಐದು ವರ್ಷಗಳ ಪೂರ್ಣಕಾಲಿಕ ಡಿಪ್ಲೊಮಾ.

5. ಆಂಧ್ರ ಪ್ರದೇಶ ಸರ್ಕಾರದ ರಾಜ್ಯ ತಾಂತ್ರಿಕ ಶಿಕ್ಷಣ ಮತ್ತು ತರಬೇತಿ ಮಂಡಳಿಯು 1960 ರಿಂದ ಪರಿಣಮಿಸುವಂತೆ ನೀಡಿದ ವಾಸ್ತುಶಿಲ್ಪದಲ್ಲಿ ಡಿಪ್ಲೊಮಾ (ಸರ್ಕಾರಿ ಕಲಾ ಮತ್ತು ವಾಸ್ತುಶಿಲ್ಪ ಕಾಲೇಜು ಹೈದರಾಬಾದ್, ಇಲ್ಲಿ ತರಬೇತಿ ಪಡೆದ ವಿದ್ಯಾರ್ಥಿಗಳಿಗೆ).

6. ಆಂಧ್ರಪ್ರದೇಶದ ರಾಜ್ಯ ತಾಂತ್ರಿಕ ಶಿಕ್ಷಣ ಮಂಡಳಿಯು ನಡೆಸುವ ವಾಸ್ತುಶಿಲ್ಪದ ವಿಶೇಷ ಅಂತಿಮ ಪರೀಕ್ಷೆಯಲ್ಲಿ ಸಂಬಂಧಪಟ್ಟ ಅಭ್ಯರ್ಥಿಗಳು ಆ ತರುವಾಯ ಪಾಸಾಗಿರಬೇಕೆಂಬ ಮತ್ತು ವಿಶೇಷ ಪ್ರಮಾಣಪತ್ರವನ್ನು ಪಡೆದಿರಬೇಕೆಂಬ ಷರತ್ತಿಗೆ ಒಳಪಟ್ಟು ಸರ್ಕಾರಿ ಕಲಾ ಮತ್ತು ವಾಸ್ತುಶಿಲ್ಪ ಕಾಲೇಜು, ಹೈದರಾಬಾದ್ 1959ರವರೆಗೆ ನೀಡಿರುವ ವಾಸ್ತುಶಿಲ್ಪದಲ್ಲಿ ಡಿಪ್ಲೊಮಾ.

7. ಸರ್ಕಾರಿ ಪಾಲಿಟೆಕ್ನಿಕ್, ನಾಗಪುರ ಇಲ್ಲಿ ತರಬೇತಿ ಪಡೆದ ವಿದ್ಯಾರ್ಥಿಗಳಿಗೆ 1965ರಿಂದ ಪರಿಣಮಿಸುವಂತೆ ನಾಗಪುರ ವಿಶ್ವವಿದ್ಯಾನಿಲಯ ನೀಡಿದ ವಾಸ್ತುಶಿಲ್ಪದಲ್ಲಿ ಡಿಪ್ಲೊಮಾ.

8. ಮಹಾರಾಷ್ಟ್ರ ಸರ್ಕಾರವು (ಈ ಮೊದಲಿನ ಬಾಂಬೆ ಸರ್ಕಾರ) ನೀಡಿದ ವಾಸ್ತುಶಿಲ್ಪದಲ್ಲಿ ಸರ್ಕಾರಿ ಡಿಪ್ಲೊಮಾ.

9. ಕಲಾಭವನ ತಾಂತ್ರಿಕ ಸಂಸ್ಥೆ, ಬರೋಡಾ ಇದು ನೀಡುವ ವಾಸ್ತು ಶಿಲ್ಪ ಡಿಪ್ಲೊಮಾ.

10. ವಾಸ್ತುಶಿಲ್ಪ ಶಾಲೆ, ಅಹಮದಾಬಾದ್ ಇದು ನೀಡಿದ ವಾಸ್ತುಶಿಲ್ಪದಲ್ಲಿ ಡಿಪ್ಲೊಮಾ.

11. ಭಾರತೀಯ ವಾಸ್ತುಶಿಲ್ಪಿಗಳ ಸಂಸ್ಥೆಯ ಸದಸ್ಯತ್ವ.

12. ನಾಗಪುರ ವಿಶ್ವವಿದ್ಯಾನಿಲಯವು 1962–64ರ ಅವಧಿಯಲ್ಲಿ ನೀಡಿರುವ ವಾಸ್ತು ಶಿಲ್ಪದಲ್ಲಿ ಡಿಪ್ಲೊಮಾ.

* * *

Govt. Press, Bangalore, P7, W.D:283 , Copies: 150